
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

# ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯಯುತ ಉಪಕ್ರಮಗಳು



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಧಾರವಾಡ

# ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್) ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್‌ಶಿಪ್ ಅಕಾಡಮಿ (SLA_SISLEP)**

**ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL_NIEPA), ನವದೆಹಲಿ**
**ಇವರ ಸಹಯೋಗದಲ್ಲಿ**

## ತರಬೇತಿ ಸಾಹಿತ್ಯ ಕೈಪಿಡಿ

# "ಬೋಧನಾ – ಕಲಿಕಾ ಪ್ರಕ್ರಿಯೆಯಲ್ಲಿ ನಾವಿನ್ಯಯುತ ಉಪಕ್ರಮಗಳು"

**ಸಹಕಾರ**

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ

# 2023–24

## ಪರಿಕಲ್ಪನೆ

**ಡಾ.ಬಿ.ಕೆ.ಎಸ್.ವರ್ಧನ**

ನಿರ್ದೇಶಕರು

ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಕರ್ನಾಟಕ (SISLEP) ಧಾರವಾಡ

## ಮಾರ್ಗದರ್ಶನ

**ಶ್ರೀಮತಿ ಜಯಶ್ರೀ ಕಾರೇಕರ**

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಚಾರ್ಯರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ.

## ಸಾಹಿತ್ಯ ರಚನಾ ತಂಡ

ಡಾ. ರೇಣುಕಾ ಅಮಲಝರಿ,

ಉಪನ್ಯಾಸಕರು, ಡಯಟ್ ಧಾರವಾಡ

ಶ್ರೀಮತಿ ಮಂಜುಳಾ ಅಂಬಿಗೇರ,

ಉಪನ್ಯಾಸಕರು, ಡಯಟ್ ಧಾರವಾಡ

**ಶ್ರೀಮತಿ ವಿಜಯಲಕ್ಷ್ಮೀ ಅರ್ಕಸಾಲಿ,**
**ಉಪನ್ಯಾಸಕರು, ಡಯಟ್ ಧಾರವಾಡ**

**ಶ್ರೀ ಸಂಜೀವಕುಮಾರ ಭೂಶೆಟ್ಟಿ**
**ವಿಜ್ಞಾನ ಶಿಕ್ಷಕರು, ಸ. ಪೌ್ರ,ಶಾಲೆ**
**ಕುಸುಗಲ್, ಹುಬ್ಬಳ್ಳಿ ಗ್ರಾಮೀಣ**

**ಡಾ. ಲಿಂಗರಾಜ ರಾಮಾಪೂರ,**

ಇಂಗ್ಲೀಷ್ ಶಿಕ್ಷಕರು ಸ. ಪೌ್ರ.ಶಾಲೆ ಕಿರೇಸೂರ. ಹುಬ್ಬಳ್ಳಿ ಗ್ರಾಮೀಣ ಧಾರವಾಡ

## ಎಸ್.ಎಲ್.ಎ - ಸಿಸ್ಲೆಪ್ ತಂಡ

**ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು**

**ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು**

**ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು**

**ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು**

**ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು**

**ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು**

## ನಿರ್ದೇಶಕರ ಆಶಯ ನುಡಿ



ಡಾ. ಬಿ.ಕೆ.ಎಸ್. ವರ್ಧನ್
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್),
ಕರ್ನಾಟಕ, ಧಾರವಾಡ

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ

ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

**ದಿನಾಂಕ: 25, ಮಾರ್ಚ, 2025** **(ಡಾ. ಬಿ.ಕೆ.ಎಸ್. ವರ್ಧನ್)**

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP) ಯ ಪರಿಚಯ:

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (State Institute of School Leadership, Educational Planning and Management (SISLEP) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ'ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



## ಸಂಸ್ಥೆಯ ದೂರದರ್ಶಿತ್ವ:

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ: 08362441129 ಇ–ಮೇಲ್:** sislepdirector.dwd@gmail.com

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management, Administration and Training) ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

### ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.

- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ

ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.
- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು:** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು. ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.
- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೆಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

### ❖ ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ

ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ

ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**
**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**
**ಮಿಕ್ಕುದೆಲ್ಲಂ ಅವಿದ್ಯೆ"**
**-- ರಾಷ್ಟ್ರಕವಿ ಕುವೆಂಪು.**

# ಪರಿವಿಡಿ


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| 1 | ಬೋಧನಾ –ಕಲಿಕಾ ಪ್ರಕ್ರಿಯೆ ಅರ್ಥೈಸುವಿಕೆ: | 1-5 |
| | 1.1 ಪರಿಕಲ್ಪನಾ ಟಿಪ್ಪಣಿ | 1-2 |
| | 1.2 ಶೈಕ್ಷಣಿಕ ನಾಯಕತ್ವದ ದೃಷ್ಟಿಕೋನದಲ್ಲಿ | 2 |
| | 1.3 ಉದ್ದೇಶಗಳು | 3-4 |
| | 1.4 ನಿರೀಕ್ಷಿತ ಫಲಿತಗಳು | 4-5 |
| 2 | ಕಲಿಕಾ-ಬೋಧನಾ ಕ್ರಮಗಳು ಪ್ರಕ್ರಿಯೆಯಲ್ಲಿನ ಬದಲಾವಣೆಗಳು | **5-43** |
| | 2.1 ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ಬಲವರ್ಧನೆಗೊಳಿಸುವುದು ಏಕೆ ಅಗತ್ಯ? | 6 |
| | 2.2 ನವೀನ ಅಭ್ಯಾಸಕ್ರಮಗಳು ಮತ್ತು ತರಗತಿ ಪ್ರಕ್ರಿಯೆ | 7-9 |
| | 2.3 ಕಲಿಕಾ ಸ್ನೇಹಿ ತರಗತಿಗೆ ನವೀನ ಬೋಧನಾ ವಿಧಾನಗಳು | 10-11 |
| | 2.4 ಯೋಜನಾ ಆಧಾರಿತ ಕಲಿಕಾ ವಿಧಾನ : (Project Based Learning Method ) | 11-20 |
| | 2.5 ಕ್ಷೇತ್ರ ಅಧ್ಯಯನ (Field trips) | 21 |
| | 2,6 ವಿನ್ಯಾಸ ಆಧಾರಿತ ಕಲಿಕೆ.Design Thinking Learning | 22-23 |
| | 2.7 ಕಲಾ ಅಂತರ್ಗತ ಕಲಿಕೆ . (Art Integrated Learning) (ಕಲಾ ಸಮ್ಮಿಳಿತ ಕಲಿಕೆ) | 23-31 |
| | 2.8 ತಂತ್ರಜ್ಞಾನ ಆಧಾರಿತ ಕಲಿಕೆ | 31-39 |
| | 2.9 ಮಕ್ಕಳ ಕಲಿಕೆಗೆ ಹೊಸ ಚೇತನವಾದ ರಚನಾವಾದ | 39-43 |
| 3 | ತರಗತಿ ನಿರ್ವಹಣಾ ಕೌಶಲ್ಯಗಳನ್ನು ಬಲಪಡಿಸುವಿಕೆ. | 44-45 |
| 4 | ಶೈಕ್ಷಣಿಕ ಮೇಲ್ವಿಚಾರಣಾಧಿಕಾರಿಗಳ "ಬೋಧನಾ-ಕಲಿಕಾ ಪ್ರಕ್ರಿಯೆಯ ನಾವೀನ್ಯಯುತ ಉಪಕ್ರಮಗಳ ಅನುಷ್ಠಾನ ಮೌಲ್ಯಮಾಪನ" ನಮೂನೆ | 46-48 |
| 5 | ಬೋಧನೆ-ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯಯುತ ವಿಧಾನಗಳು – ಮೌಲ್ಯಮಾಪನ | 49 |
| 6 | ಉಪಸಂಹಾರ | 50 |
| 7 | ಗ್ರಂಥಋಣ/ ಆಧಾರಗಳು | 51 |

## ಶೀರ್ಷಿಕೆ: ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯಯುತ ಉಪಕ್ರಮಗಳು

### 1 ಬೋಧನಾ–ಕಲಿಕಾ ಪ್ರಕ್ರಿಯೆ ಅರ್ಥೈಸುವಿಕೆ.

### 1.1 ಪರಿಕಲ್ಪನಾ ಟಿಪ್ಪಣಿ

ಶೈಕ್ಷಣಿಕ ಚಟುವಟಿಕೆಗಳಲ್ಲಿ ಬೋಧನಾ-ಕಲಿಕಾ ಪ್ರಕ್ರಿಯೆ, ಪ್ರಧಾನವಾದ ಅಂಶ. ಸಂವಿಧಾನದ ಮೌಲ್ಯಗಳು, ಶೈಕ್ಷಣಿಕ ಗುರಿ ಉದ್ದೇಶಗಳನ್ನು ನಿರೂಪಿಸುವ, ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ಜೀವನ ಕೌಶಲಗಳಾಗಿ ರೂಪಿಸುವ, ಸಾಮಾಜೀಕರಣಗೊಳಿಸುವ ಹಾಗೂ ರಾಷ್ಟ್ರ ಪ್ರಜ್ಞೆಯನ್ನು ಜಾಗೃತಗೊಳಿಸುವ ಕೇಂದ್ರವಾಗಿ ತರಗತಿ ಪ್ರಕ್ರಿಯೆ ನಡೆಯುತ್ತದೆ.

ಈ ಕುರಿತಾಗಿ ನಿರೂಪಿತವಾದ ಹೊಸ ಹೊಸ ಸಂಶೋಧನೆಗಳು ಹಾಗೂ ನಾವಿನ್ಯತೆಗಳಿಗೆ ತಕ್ಕಂತೆ ತರಗತಿ ಪ್ರಕ್ರಿಯೆಯಲ್ಲಿ ಬದಲಾವಣೆ ತಂದುಕೊಳ್ಳುವುದು ಬಹು ಮುಖ್ಯವಾಗಿದೆ. ಈ ರೀತಿಯಾದ ಅಮೂಲಾಗ್ರ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಶಿಕ್ಷಣದ ವಿವಿಧ ಭಾಗೀದಾರರ ಹಂತದಲ್ಲಿ ಹಲವಾರು ಉತ್ತಮ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತಾ ಬರಲಾಗಿದೆ ಮತ್ತು ವಿವಿಧ ಸ್ಥರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಬಹಳಷ್ಟು ಶಿಕ್ಷಕರು ತರಗತಿ ಪ್ರಕ್ರಿಯೆಯಲ್ಲಿ ನಾವಿನ್ಯಯುತವಾಗಿ ಅನುಸರಿಸುವ ಮೂಲಕ ವಿದ್ಯಾರ್ಥಿಗಳಿಗೆ ಕಲಿಕಾ ಅನುಭವಗಳನ್ನು ಸುಂದರಗೊಳಿಸಿದ ನಿದರ್ಶನಗಳು ನಮ್ಮ ಮುಂದೆ ಇವೆ. ಬೋಧನಾ-ಕಲಿಕಾ ಪ್ರಕ್ರಿಯೆಯ ಸಫಲತೆ ಮತ್ತು ಪರಿಣಾಮಕತೆ ಶ್ಕಿಕ್ಷಕರ ವೃತ್ತಿಪರ ಬೆಳವಣಿಗೆಯ ಮೇಲಿದೆ. ಶೈಕ್ಷಣಿಕ ಗುರಿ ಉದ್ದೇಶಗಳನ್ನು ಬದಲಾದ ಸನ್ನಿವೇಶಗಳಿಗೆ ಹಾಗೂ ಪಠ್ಯಕ್ರಮಕ್ಕೆ ಹೊಂದಿಸಿಕೊಂಡು ತರಗತಿ ನಿರ್ವಹಿಸುವ ಕೌಶಲ್ಯಗಳನ್ನು ಪಡೆದುಕೊಂಡರೆ ವಿದ್ಯಾರ್ಥಿಗಳ ಕಲಿಕಾ ಅನುಭವಗಳನ್ನು ಗಟ್ಟಿಗೊಳಿಸಬಹುದು. ಶಿಕ್ಷಕರು ತಮ್ಮ ಬೋಧನಾ ತಂತ್ರಗಳಲ್ಲಿ ನಾವಿನ್ಯತೆ ಪಡೆಯಲು ವಿದ್ಯಾರ್ಥಿಗಳು ಕಲಿಕಾ ಫಲಗಳನ್ನು ಸಾಧಿಸಿಕೊಳ್ಳಲು ಸಹಕಾರಿಯಾದ ಉಪಕ್ರಮಗಳನ್ನು ಶೈಕ್ಷಣಿಕ ಮೇಲ್ವಿಚಾರಕರು ಮಾರ್ಗದರ್ಶನ ಮತ್ತು ಬೆಂಬಲ ಒದಗಿಸಲು ಏನೆಲ್ಲ ಯೋಜನೆಗಳನ್ನು ರೂಪಿಸಬೇಕು? ಹೇಗೆ ಬೆಂಬಲ ನೀಡಬೇಕು? ಮಾರ್ಗದರ್ಶಕರಾಗಿ ಯಾವೆಲ್ಲ ಪರಿಣಾಮಕಾರಿ ಬೋಧನಾ – ಕಲಿಕಾ ಪ್ರಕ್ರಿಯೆಯ ವಿಧಾನಗಳಿವೆ ಎಂಬುದನ್ನು ತಿಳಿಸುವ ಪ್ರಯತ್ನ ಈ ಮಾಡ್ಯೂಲ್ ಮೂಲಕ ಮಾಡಲಾಗಿದೆ. ಶಿಕ್ಷಕರು ಮತ್ತು ಮೇಲ್ವಿಚಾರಕರು ತರಗತಿ ನಿರ್ವಹಣೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಇದು ಉತ್ತಮ ತರಬೇತಿ ಸಾಹಿತ್ಯವಾಗಿದೆ.

ಶಿಕ್ಷಕರು ತಮ್ಮ ಬೋಧನಾ ಕ್ರಮಗಳಲ್ಲಿ ಹೊಸತನ ತೋರಿಸಿದರೆ ಮಕ್ಕಳ ಕಲಿಕೆಯ ವೇಗವು ದ್ವಿಗುಣವಾಗುವುದು ಎಂಬುದನ್ನು ಹಲವಾರು ಅಧ್ಯಯಯನಗಳು ಸಾಬೀತುಪಡಿಸಿದ ಹಿನ್ನಲೆಯಲ್ಲಿ ಅವುಗಳ

ನಿಹಿತಾರ್ಥಗಳ ಆಧಾರದ ಮೇಲೆ ಈ ಮಾಡ್ಯೂಲ್ ನ್ನು ರಚಿಸಲಾಗಿದ್ದು ಶೈಕ್ಷಣಿಕ ಮೇಲ್ವಿಚಾರಣಾ ಅಧಿಕಾರಿಗಳು ಮತ್ತು ಅನುಷ್ಠಾನಾಧಿಕಾರಿಗಳಿಗೆ ಇದೊಂದು ಉತ್ತಮ ಕೈಪಿಡಿಯಾಗಿದೆ.

## 1.2 ಶೈಕ್ಷಣಿಕ ನಾಯಕತ್ವದ ದೃಷ್ಟಿಕೋನದಲ್ಲಿ

ಗುಣಾತ್ಮಕ ಶಿಕ್ಷಣದ ಬಹುಪಾಲು ಆಯಾಮಗಳು, ಆಶಯಗಳು ಈಡೇರುವುದು, ಆಯಾ ಶಾಲೆ / ಸಂಸ್ಥೆಯ ಮುಖ್ಯಸ್ಥರ ಕಾಳಜಿ, ಬದ್ಧತೆ ಮತ್ತು ಕಾರ್ಯಶೈಲಿಯಿಂದ. ಬೋಧನಾ ಕಲಿಕಾ ಚಟುವಟಿಕೆಯ ಸಮರ್ಥತೆ ಮುಖ್ಯಶಿಕ್ಷಕರ ಉಪಸ್ಥಿತಿ, ಅವರ ಕಾರ್ಯಯೋಜನೆ, ಪೂರ್ವಸಿದ್ಧತೆ, ಕಲಿಸುವ ಪದ್ಧತಿ, ಮೌಲ್ಯಮಾಪನದ ಕಾರ್ಯತಂತ್ರಗಳ ಬಳಕೆ, ಎಲ್ಲಾ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವ, ಕಲಿಕಾ ವಾತಾವರಣ ಕಲ್ಪಿಸುವ ಸಾಮರ್ಥ್ಯ, ಪಠ್ಯವಿಷಯ ಜ್ಞಾನ, ವ್ಯಕ್ತಿತ್ವ ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ಮುಖ್ಯಶಿಕ್ಷಕರು ಸಮರ್ಪಕವಾಗಿ ನಿರ್ವಹಿಸುತ್ತ ಇತರೆ ಶಿಕ್ಷಕರು ಸಮರ್ಥವಾಗಿ ನಿರ್ವಹಿಸುವಂತೆ ಮಾಡುವ ನಾಯಕತ್ವವನ್ನು ಹೊಂದಿದ್ದರೆ ನಿರೀಕ್ಷಿತ ಗುಣಮಟ್ಟವನ್ನು ಸಾಧಿಸಲು ಸಾಧ್ಯವಾಗುತ್ತದೆ.

ಮುಖ್ಯ ಶಿಕ್ಷಕ ಹಾಗೂ ಶಿಕ್ಷಕ ತನ್ನ ಅಸ್ಮಿತೆಯನ್ನು ರೂಪಿಸಿಕೊಳ್ಳುವಲ್ಲಿ ಅನೇಕ ಬಾಹ್ಯ ಕಾರಣಗಳು ಪ್ರಭಾವ ಬೀರುತ್ತವೆ. ತಾನು ಬೆಳೆದ ಬಗೆ, ಪಡೆದ ಶಿಕ್ಷಣ, ವೃತ್ತಿಪರ ತರಬೇತಿ, ಆರ್ಥಿಕ ಸಾಮಾಜಿಕ ಹಿನ್ನೆಲೆ, ಸಮಾಜದ ನಿರೀಕ್ಷೆಗಳು ಮತ್ತು ಒತ್ತಾಸೆಗಳು ಮುಂತಾದವು. ಇವೆಲ್ಲವುಗಳ ಹೊರತಾಗಿ ತನ್ನ ವೃತ್ತಿಯ ಆಶಯಗಳು, ತಾನಿರುವ ಸಂದರ್ಭ, ಅಗತ್ಯಗಳಿಗೆ ತಕ್ಕಂತೆ ತನ್ನ ವ್ಯಕ್ತಿತ್ವ ಮತ್ತು ವೃತ್ತಿಪರತೆಯನ್ನು ನಿರಂತರವಾಗಿ ರೂಪಿಸಿಕೊಳ್ಳುವುದು ಮತ್ತು ಬದಲಾಗುತ್ತಿರುವ ಶೈಕ್ಷಣಿಕ ಚಿಂತನೆಗೆ ತೆರೆದುಕೊಳ್ಳುವುದು ಪ್ರತಿಯೊಬ್ಬ ಮುಖ್ಯ ಶಿಕ್ಷಕ ಹಾಗೂ ಶಿಕ್ಷಕನ ಜವಾಬ್ದಾರಿಯಾಗಿರುತ್ತದೆ. ಯಾವುದೇ ಸಿದ್ಧ ಮಾದರಿಗಳನ್ನು ಮೀರಿ ಮುಖ್ಯ ಶಿಕ್ಷಕ ಹಾಗೂ ಶಿಕ್ಷಕರು ತಮ್ಮಆಂತರಿಕ ಬಲದಿಂದಲೇ ಅಸ್ಮಿತೆಯನ್ನು ಕಂಡುಕೊಳ್ಳಬೇಕು. ಅಂತಹ ಅಸ್ಮಿತೆಯನ್ನು ಬೆಳೆಸಿಕೊಳ್ಳಲು ಎಲ್ಲ ರೀತಿಯ ಅವಕಾಶಗಳನ್ನು ಮೇಲ್ವಿಚಾರಕರು ಒದಗಿಸಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶೈಕ್ಷಣಿಕ ಮೇಲ್ವಿಚಾರಕರು ಅಲೋಚಿಸಬೇಕಾಗಿದೆ ಅಲ್ಲವೇ? ಈ ಕಾರಣಕ್ಕಾಗಿ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಹೊಸತನವನ್ನು ಸೃಜಿಸುವಲ್ಲಿ ಮೇಲ್ವಿಚಾರಕರ ನಾಯಕತ್ವದ ಕುರಿತು ಅರಿವು ಮೂಡಿಸುವುದು ಈ ಮಾಡ್ಯೂಲ್ ನ ಉದ್ದೇಶವಾಗಿದೆ.

## 1.3 ಉದ್ದೇಶಗಳು:

ಶಿಕ್ಷಕರು ತಮ್ಮ ಬೋಧನೆಯಲ್ಲಿ ಸದಾ ಹೊಸತನ ಹೊಂದಿದ್ದರೆ ಮಾತ್ರ ವಿದ್ಯಾರ್ಥಿ ಕೇಂದ್ರಿತ ತರಗತಿ ನಿರ್ವಹಣೆಯಾಗುವುದು ಮತ್ತು ಪ್ರತಿ ಮಗುವಿನ ಕಲಿಕೆ ಸಂತಸದಾಯಕವಾಗಲು ಸಾಧ್ಯ. ನಾವಿನ್ಯಯುತ ಬೋಧನಾ ಕಲಿಕಾ ವಿಧಾನಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ರೂಢಿಸುವಲ್ಲಿ ಶೈಕ್ಷಣಿಕ ಮೇಲ್ವಿಚಾರಕರಾಗಿರುವ ನಮಗೆ ಈ ಉದ್ದೇಶಗಳು ಸ್ಪಷ್ಟವಾಗಿರಬೇಕಾಗುತ್ತದೆ.

- ಮೇಲ್ವಿಚಾರಕರಿಗೆ ಕಲಿಕೆಯ ಪರಿಣಾಮಕತ್ವಕ್ಕೆ ಇರುವ ವಿವಿಧ ನಾವಿನ್ಯಯುತ ಬೋಧನಾ ವಿಧಾನಗಳ ಬಗ್ಗೆ ಅರಿವು ಮೂಡಿಸುವುದು.
- ಶಿಕ್ಷಕರ ನಾಯಕತ್ವವನ್ನು ಪ್ರೋತ್ಸಾಹಿಸುವದರ ಮೂಲಕ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಬಲಪಡಿಸುವುದು.
- ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ಬಲಪಡಿಸಲು ವೈಜ್ಞಾನಿಕ ವಿಧಾನಗಳ ಬಳಕೆ ಮತ್ತು ಸಂಯೋಜಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಅವಕಾಶಗಳನ್ನು ಸೃಷ್ಟಿಸುವುದು.
- ಸಾಮರ್ಥ್ಯಾಧಾರಿತ/ಕಲಿಕಾಫಲ ಆಧಾರಿತ ಕಲಿಕಾ ಚಟುವಟಿಕೆಗಳನ್ನು ರೂಪಿಸುವ ಮತ್ತು ಮೌಲ್ಯಮಾಪನ ಮಾಡುವ ಕ್ರಮಗಳನ್ನು ಸಿದ್ಧಪಡಿಸುವಲ್ಲಿ ಶಿಕ್ಷಕರ ಕೌಶಲವನ್ನು ಹೆಚ್ಚಿಸುವುದು.
- ತಂತ್ರಜ್ಞಾನ ಆಧಾರಿತ ತಗರತಿ ನಿರ್ವಹಣೆಗೆ ಸೂಕ್ತ ಬೆಂಬಲ ನೀಡುವುದು
- ಕಲಾ ಅಂತರ್ಗತ ಕಲಿಕೆಯ ವಿಧಾನಗಳ ಮೂಲಕ ವಿದ್ಯಾರ್ಥಿಗಳಲ್ಲಿ ಜೀವನ ಕೌಶಲಗಳನ್ನು ವೃದ್ಧಿಸುವಲ್ಲಿ ಶಿಕ್ಷಕರನ್ನು ಸಮರ್ಥರನ್ನಾಗಿಸುವುದು.

**ಕಲಿಕಾ ಚಟುವಟಿಕೆಗಳನ್ನು ವಿಭಿನ್ನವಾಗಿ ರಚಿಸುವ ಶಿಕ್ಷಕರ ಮಾತಿದು.**

ನವೀನ ಬೋಧನಾ ಕಾರ್ಯತಂತ್ರಗಳು ಬೆಳವಣಿಗೆಯ ಮನಸ್ಥಿತಿಯಿಂದ ಪ್ರಾರಂಭವಾಗುತ್ತವೆ. ಕಲಿಕೆಯ ಉದ್ದೇಶಗಳು ಸ್ಪಷ್ಟವಾಗುತ್ತವೆ. ಈ ಹಿನ್ನಲೆಯಲ್ಲಿ ನಾವು ಸುಧಾರಣೆಗೆ ಅವಕಾಶವನ್ನು ಗುರುತಿಸುತ್ತೇವೆ. ಹೊಸದನ್ನು ರಚಿಸುತ್ತೇವೆ ಅಥವಾ ಅಸ್ತಿತ್ವದಲ್ಲಿರುವ ಮಹತ್ವದ ವಿಧಾನಗಳನ್ನು ಅಳವಡಿಸಿಕೊಳ್ಳುತ್ತೇವೆ. ನಾವು ಅಪಾಯಗಳನ್ನು ಎದುರಿಸುತ್ತೇವೆ. ನಾವು ವಿಫಲರಾಗಬಹುದು. ನಾವು ಮತ್ತೆ ಪ್ರಯತ್ನಿಸುತ್ತೇವೆ. ನಾವು ಪುನರಾವರ್ತಿಸುತ್ತೇವೆ ಮತ್ತು ಹಾಗೆ ಮಾಡುವ ಮೂಲಕ ನಮ್ಮ ವಿದ್ಯಾರ್ಥಿಗಳನ್ನು ಅದೇ ರೀತಿ ಮಾಡಲು ಪ್ರೇರೇಪಿಸುತ್ತೇವೆ ತರಗತಿಯಲ್ಲಿ ನಾವೀನ್ಯತೆ ಮತ್ತು ಸೃಜನಶೀಲತೆಯ ಸಂಸ್ಕೃತಿಯನ್ನು ಸ್ಥಾಪಿಸುತ್ತೇವೆ.

## ಶಿಕ್ಷಕರು ಯಾಕೆ ನಾವಿನ್ಯತೆಗೆ ತಮ್ಮನ್ನು ತೆರೆದುಕೊಳ್ಳಬೇಕು?

ಒಂದು ತರಗತಿ ಅಥವಾ ಕಲಿಕೆಯ ಒಂದು ಹಂತದಲ್ಲಿ ಇರುವ ವಿದ್ಯಾರ್ಥಿಗಳಿಗೆ ಯಾವ ವಿಧಾನ ಉತ್ತಮವಾದ ಪರಿಣಾಮವನ್ನು ನೀಡುತ್ತದೆಯೋ ಅದು ಬೇರೆ ತರಗತಿಯಲ್ಲಿ ಅಥವಾ ಕಲಿಕೆಯ ಬೇರೆ ಹಂತದಲ್ಲಿ ಇರುವ ವಿದ್ಯಾರ್ಥಿಗಳಿಗೆ ಉತ್ತಮವಾಗಿಲ್ಲದಿರಬಹುದು. ನಾವೀನ್ಯಯುತವಾಗಿ ಆಲೋಚಿಸುವ ಶಿಕ್ಷಕರು ಕಾರ್ಯತಂತ್ರದ ಪರಿಣಾಮಕಾರತ್ವವನ್ನು ನಿರಂತರವಾಗಿ ನಿರ್ಣಯಿಸುತ್ತಾರೆ. ಮತ್ತು ಅಗತ್ಯವಿರುವ ಕಡೆಗೆ ಹೊಂದಾಣಿಕೆಗಳನ್ನು ಮಾಡುತ್ತಾರೆ. ಸ್ಪಷ್ಟವಾದ ತರಗತಿಯ ನಿರೀಕ್ಷೆಗಳನ್ನು ಪ್ರಸ್ತುತಪಡಿಸುವ ಮೂಲಕ, ಸಾಮಾಜಿಕ ಕೌಶಲ್ಯಗಳನ್ನು ಸುಧಾರಿಸಲು ಅವಕಾಶಗಳನ್ನು ಒದಗಿಸುವ ಕಾರಣಕ್ಕಾಗಿ ನಾವಿನ್ಯತೆಗೆ ತಮ್ಮನ್ನು ತೆರೆದುಕೊಳ್ಳಬೇಕು .

ಎಲ್ಲ ಶಿಕ್ಷಕರು ಈ ರೀತಿ ಕಾರ್ಯತಂತ್ರಗಳನ್ನು ಸಿದ್ಧಪಡಿಸುವಂತೆ ಹಾಗೂ ವಿವಿಧ ವಿಧಾನಗಳನ್ನು ಬಳಸಿಕೊಳ್ಳುವಂತೆ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ಮೇಲ್ವಿಚಾರಕರಾಗಿ ಒದಗಿಸಬೇಕಾಗುತ್ತದೆ. ಅಂದಾಗ ಮಾತ್ರ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ನಾವಿನ್ಯತೆಯನ್ನು ಬಳಸಿಕೊಳ್ಳುವ ಮತ್ತು ವಿದ್ಯಾರ್ಥಿಗಳು ಸಂತಸದ ಕಲಿಕೆಯ ಅನುಭವಗಳನ್ನು ಪಡೆಯುವ ಉದ್ದೇಶಗಳನ್ನು ತಲುಪಲು ಸಾಧ್ಯವಾಗುತ್ತದೆ.

### 1.4 ನಿರೀಕ್ಷಿತ ಫಲಿತಗಳು

- ಮೇಲ್ವಿಚಾರಕರ ಸೂಕ್ತ ಬೆಂಬಲ ಮತ್ತು ಮಾರ್ಗದರ್ಶನದಿಂದಾಗಿ ಶಿಕ್ಷಕರು ನಾವಿನ್ಯಯುತ ತರಗತಿ ನಿರ್ವಹಣೆಯನ್ನು ಸಮರ್ಥಗೊಳಿಸುತ್ತಾರೆ
- ನಾವೀನ್ಯಯುತ ಬೋಧನಾ ತಂತ್ರಗಳು ಕಲಿಕೆಯಲ್ಲಿ ಉತ್ತಮ ಅಭ್ಯಾಸಗಳನ್ನು ಹೆಚ್ಚಿಸುತ್ತವೆ.
- ಮೇಲ್ವಿಚಾರಕರು ತಂತ್ರಜ್ಞಾನ ಆಧಾರಿತ ಕಲಿಕೆಗೆ ನೀಡುವ ಬೆಂಬಲವು ವಿದ್ಯಾರ್ಥಿಗಳಲ್ಲಿ ಆಧುನಿಕ ಜ್ಞಾನಧಾರಿತ ಕೌಶಲಗಳನ್ನು ಪಡೆಯುವಲ್ಲಿ ಸಮರ್ಥರನ್ನಾಗಿಸುತ್ತದೆ.
- ವಿವಿಧ ಬೋಧನಾ ವಿಧಾನಗಳು ವಿದ್ಯಾರ್ಥಿಗಳ ಸಮಗ್ರ ಕಲಿಕೆಯ ಮೌಲ್ಯಮಾಪನಕ್ಕೆ ಮತ್ತು ಕಲಿಕೆಯನ್ನು ಭವಿಷ್ಯದ ಜೀವನಕ್ಕೆ ಗಟ್ಟಿಗೊಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ ಎಂದು ತಿಳಿಯುವಲ್ಲಿ ಮೇಲ್ವಿಚಾರಕರು ಸಮರ್ಥರಾಗುತ್ತಾರೆ.
- ವಿಧಾನಗಳು ನವೀನ ಅಭ್ಯಾಸ ಕ್ರಮಗಳಿಂದಾಗಿ ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ

ಮೂಲಕ ವಿದ್ಯಾರ್ಥಿಗಳು ತರಗತಿಗೆ ಗೈರುಹಾಜರಾಗುವ ಸಾಧ್ಯತೆ ಕಡಿಮೆ ಮತ್ತು ಶೈಕ್ಷಣಿಕವಾಗಿ ಯಶಸ್ವಿಯಾಗುವ ಸಾಧ್ಯತೆ ಹೆಚ್ಚಾಗುವುದು.

## 2 ಕಲಿಕಾ -ಬೋಧನಾ ಕ್ರಮಗಳು ಪ್ರಕ್ರಿಯೆಯಲ್ಲಿನ ಬದಲಾವಣೆಗಳು

**'ಶಿಕ್ಷಕ'** ಎನ್ನುವುದು ಒಂದು ವೃತ್ತಿ ಪ್ರಧಾನ ಸೂಚಕವಾಗಿದ್ದು ಪ್ರಾಚೀನ ಕಾಲದಿಂದಲೂ 21 ನೇ ಶತಮಾನವೆಂದು ಗುರುತಿಸಿಕೊಳ್ಳುತ್ತಿರುವ ಇಂದಿನ ದಿನದವರೆಗೂ ಅಳಿಸಲಾಗದ ಮಹತ್ವದ ಸ್ಥಾನವನ್ನು ಪಡೆದುಕೊಂಡೇ ಮುನ್ನಡೆಯುತ್ತಿದೆ. ಗುರುಕೇಂದ್ರಿತ ಶಿಕ್ಷಣ ವ್ಯವಸ್ಥೆಯಿಂದ ಪ್ರಾರಂಭವಾದ ಔಪಚಾರಿಕ ಶಿಕ್ಷಣ ಕ್ರಮವು ಬದಲಾವಣೆಯ ಹಲವಾರು ಮಜಲುಗಳನ್ನು ದಾಟಿ ಶಿಶುಕೇಂದ್ರಿತ ಶಿಕ್ಷಣ

ವ್ಯವಸ್ಥೆಯನ್ನು ಹುಟ್ಟುಹಾಕಿತು. ಮಕ್ಕಳ **ಕಲಿಕೆಯ** ವೇಗ ಮತ್ತು ಆಸಕ್ತಿಗನುಗುಣವಾಗಿ ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸುವ ಜೀವನ ಕೌಶಲಗಳನ್ನು ಬೆಳೆಸುವ ಪಠ್ಯಕ್ರಮ ರಚನೆಯ ಪರಂಪರೆಯು ಮಹತ್ವ ಪಡೆಯಿತು. ಸಂವಿಧಾನಿಕ ಮೌಲ್ಯಗಳನ್ನು ರೂಢಿಸುವ ಹಾಗೂ ವೈಯಕ್ತಿಕ ಸಮಗ್ರ ಅಭಿವೃದ್ಧಿ ಹೊಂದುವಂತೆ ಮಾಡುವುದು ಶೈಕ್ಷಣಿಕ ವ್ಯಸ್ಥೆಯ ಪ್ರಥಮ ಆದ್ಯತೆಯಾಯಿತು. ಶೈಕ್ಷಣಿಕ ನೀತಿಗಳು ಆಯೋಗಗಳು ಮತ್ತು ಸರಕಾರದ ಯೋಜನೆಗಳು ಇವುಗಳನ್ನು ಪುಷ್ಠೀಕರಿಸಲು ಹಲವಾರು ಬದಲಾವಣೆಗಳನ್ನು ಕಾಲಕಾಲಕ್ಕೆ ಜಾರಿಗೊಳಿಸುತ್ತಲಿವೆ. ಈ ಆಶಯಗಳನ್ನು ಈಡೇರಿಸುವ ಎಲ್ಲ ಹಂತಗಳಲ್ಲಿಯೂ **ಬೋಧನೆ**ಯು ಪರಿಣಾಮಕಾರಿ ಸಾಧನವಾಗಿದೆ.

ಶಿಕ್ಷಕರು ತಮ್ಮ ವೃತ್ತಿಯಲ್ಲಿ ಹೊಸ ಮತ್ತು ವಿಭಿನ್ನ ಸನ್ನಿವೇಶಗಳಿಗೆ ಹೊಂದಿಕೊಂಡು ತರಗತಿಯನ್ನು ಯಶಸ್ವಿಯಾಗಿ ಮುನ್ನಡೆಸಲು ವಿವಿಧ ಬೋಧನಾ ಶೈಲಿಗಳನ್ನು ಆಳವಡಿಸಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಮುಕ್ತ ಮತ್ತು ಸಂತಸದಾಯಕ ಅವಕಾಶಗಳನ್ನು ಒದಗಿಸಲು ಸಾಮರ್ಥ್ಯ ಮತ್ತು ಕಲಿಕಾ ಫಲಗಳಿಗೆ ಅನುಗುಣವಾದ ಆಕರ್ಷಕ ಚಟುವಟಿಕೆಗಳನ್ನು ಒಳಗೊಂಡ ಪಾಠ ಯೋಜನೆಗಳನ್ನು ಸಿದ್ಧಗೊಳಿಸಿಕೊಳ್ಳಬೇಕಾಗುತ್ತದೆ. ಪಠ್ಯಕ್ರಮ ಮೀರಿದ ಕಲಿಕಾ ಅನುಭವಗಳನ್ನು ತರಗತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ನೀಡಲು ನವೀನ ಬೋಧನಾ –ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳಲೇಬೇಕಾಗುತ್ತದೆ.

ಶೈಕ್ಷಣಿಕ ನಾಯಕತ್ವದಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಗಳು ಹೃದಯಭಾಗವಿದ್ದಂತೆ ಜಾಗತೀಕರಣದ ಹಿನ್ನೆಲೆಯಲ್ಲಿ ಹಾಗೂ ಸಂವಿಧಾನದ ಆಶಯಗಳನ್ನು ಈಡೇರಿಸಲು ಬೋಧನಾ ಕಲಿಕಾ ಪ್ರಕ್ರಿಯೆಗಳ ಬಲವರ್ಧನೆ ಅಗತ್ಯ. ಈ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ Education for All (1990) , Millenium development Goal (2000), ಹಾಗೂ Sustainable development (2015), ಎಂಬ ನೀತಿಗಳು ಜಾರಿಯಲ್ಲಿ ಬರುವ ಮೂಲಕ ಗುಣಮಟ್ಟದ ಸಾರ್ವತ್ರಿಕ

ಶಿಕ್ಷಣಕ್ಕೆ ಒತ್ತು ನೀಡಿವೆ. ಅದಕ್ಕನುಗುಣವಾಗಿ ಭಾರತದಲ್ಲಿ DPEP, SSA, ಹಾಗೂ NEP-2020 ಕಾರ್ಯಾಚರಣೆ ನಡೆದಿರುವುದು ನಮಗೆಲ್ಲ ತಿಳಿದಿರುವ ವಿಷಯವಾಗಿದೆ. ಬೋಧನಾ ಕಲಿಕಾ ಪ್ರಕ್ರಿಯೆಗಳ ಫಲಿತಾಂಶವನ್ನು ಮೌಲ್ಯಾಂಕನ ಮಾಡಲು ಅನೇಕ ವರದಿಗಳು ಬಂದಿರುವುದು ನಾವೆಲ್ಲ ನೋಡಿದ್ದೇವೆ ಉದಾಹರಣೆ, CSAS, NAS ಫಲಿತಾಂಶದಂತಹ ವರದಿಗಳು ನಮ್ಮ ಬೋಧನಾ ಕಲಿಕಾ ಪ್ರಕ್ರಿಯೆಯ ಹಂತವನ್ನು ನಮಗೆ ತಿಳಿಸುವ ಮೂಲಕ ನಮ್ಮನ್ನು ಸ್ವಾವಲೋಕನೆಗೆ ಒಳಪಡಿಸಿವೆ.

ಆದ್ದರಿಂದ ಇನ್ನಷ್ಟು ಬಲವರ್ಧನೆ ಅಗತ್ಯ ಎಂಬುದನ್ನು ಒತ್ತಿಹೇಳುತ್ತಿವೆ. ಹಾಗಾದರೆ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟು ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ಏಕೆ? ಹಾಗೂ ಹೇಗೆ? ಬಲವರ್ಧನೆಗೊಳಿಸಬಹುದು ಎಂಬುದನ್ನು ಚರ್ಚಿಸೋಣ.

## 2.1 ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ಬಲವರ್ಧನೆಗೊಳಿಸುವುದು ಏಕೆ ಅಗತ್ಯ?

- ❖ ಶಿಶುಕೇಂದ್ರಿತ ಶಿಕ್ಷಣ ಹಾಗೂ ಸಂತಸದಾಯಕ ಕಲಿಕೆಗಾಗಿ
- ❖ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು
- ❖ ಪ್ರತಿ ಮಗು ವಿಭಿನ್ನ ಆದ್ದರಿಂದ ಪ್ರತಿಯೊಂದು ಮಗುವಿನ ಅಗತ್ಯಗಳ ಬಗ್ಗೆ ಸಂವೇದಶೀಲವಾಗಿರಲು
- ❖ ಕಲಿಕೆಯ ಕೀಳುರಮೆ ಹೋಗಲಾಡಿಸಿ,ಆತ್ಮವಿಶ್ವಾಸ ಬೆಳೆಸಲು
- ❖ ಬಹುತ್ವವನ್ನು ಅರ್ಥೈಸಿಕೊಳ್ಳಲು
- ❖ ಜೆಂಡರ್ ಸಮನ್ವಯಗೊಳಿಸಲು
- ❖ ಕಲಿಕಾ ಅಂತರವನ್ನು ಕಡಿಮೆಗೊಳಿಸಲು ಮತ್ತು ಸ್ವಕಲಿಕೆ ಉತ್ತೇಜಿಸಲು, ಪ್ರೋತ್ಸಾಹಿಸಲು
- ❖ ಸೃಜನಶೀಲತೆಯನ್ನು ಪ್ರೋತ್ಸಾಹಿಸಲು
- ❖ ಆಧುನೀಕರಣದ, ಜಾಗತೀಕರಣದ ಪ್ರಕ್ರಿಯೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು
- ❖ NEP 2020 ಮತ್ತು ಸುಸ್ಥಿರ ಅಭಿವೃದ್ಧಿ ಆಶಯಗಳನ್ನು ಈಡೇರಿಸಲು
- ❖ ಸಂವಿಧಾನದ ಆಶಯಗಳನ್ನು ಪೂರೈಸಲು
- ❖ ಮಗುವನ್ನು ಸಮರ್ಪಕವಾಗಿ ಅರ್ಥೈಸಿಕೊಳ್ಳಲು

- ❖ ಪಾಲಕರ ಹಾಗೂ ಶಿಕ್ಷಕರ ನಡುವೆ ನಿರಂತರ ಹಿಮ್ಮಾಹಿತಿ ಮೂಲಕ ಪರಿಕಲ್ಪನೆ ಗಟ್ಟಿಗೊಳಿಸಲು ಈ ಮೇಲಿನ ಪ್ರಮುಖ ಅವಶ್ಯಕತೆಗಳಿಗಾಗಿ ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ಬಲವರ್ಧನಗೊಳಿಸುವುದು ನಿರಂತರ ಅಗತ್ಯವಾಗಿದೆ. ಇದಕ್ಕಾಗಿ ಮೇಲ್ವಿಚಾರಕರ ಮಾರ್ಗದರ್ಶಿಯಾಗಿ ಹಾಗೂ ಪ್ರೇರಣಾತ್ಮಕವಾಗಿ ಇರಬೇಕಾದುದು ಅತ್ಯಗತ್ಯವಾಗಿದೆ.

## 2.2 ನವೀನ ಅಭ್ಯಾಸ ಕ್ರಮಗಳು ಮತ್ತು ತರಗತಿ ಪ್ರಕ್ರಿಯೆ

ವಿದ್ಯಾರ್ಥಿಗಳು 45 ನಿಮಿಷಗಳ ಉಪನ್ಯಾಸಕ್ಕಾಗಿ ತಮ್ಮ ಆಸನಗಳಲ್ಲಿ ನಿಷ್ಕ್ರಿಯವಾಗಿ ಕುಳಿತುಕೊಳ್ಳುವ ಮೂಲಕ ನಾವು ತರಗತಿಯಿಂದ ಹೆಚ್ಚಿನ ಲಾಭವನ್ನು ಪಡೆಯುತ್ತೇವೆಯೇ?

ಅಥವಾ


ಪ್ರಶ್ನೆಗಳನ್ನು ಕೇಳುವ ಮೂಲಕ, ಯೋಜನೆಗಳಲ್ಲಿ ಸಹಕರಿಸುವ ಮೂಲಕ ಮತ್ತು ಸಮಸ್ಯೆ-ಪರಿಹಾರದ ಮೂಲಕ ಡಿಜಿಟಲ್ ತರಗತಿಗಳ ಮೂಲಕ ತರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿದ್ಯಾರ್ಥಿಗಳು ಕಲಿಯುವ ಸಾಧ್ಯತೆ ಹೆಚ್ಚಿದೆಯೇ?

ನವೀನ ಬೋಧನಾ-ಕಲಿಕಾ ವಿಧಾನಗಳು ವಿದ್ಯಾರ್ಥಿ ಕೇಂದ್ರಿತ ವಾಗಿದ್ದು ತರಗತಿ ಪ್ರಕ್ರಿಯೆಯನ್ನು ಕ್ರಿಯಾಶೀಲಗೊಳಿಸುತ್ತವೆ ಎಂಬುದನ್ನು ಬಹಳಷ್ಟು ಸಮೀಕ್ಷೆಗಳ ಮೂಲಕ ಗುರುತಿಸಲಾಗಿದೆ. ಈ ಸಮೀಕ್ಷೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ?

ಮೇಲ್ವಿಚಾರಕರಾಗಿ ನಾವು ಶಾಲಾ ಭೇಟಿಯ ಸಮಯದಲ್ಲಿ ಮತ್ತು ಶಿಕ್ಷಕರ ತರಗತಿ ಪ್ರಕ್ರಿಯೆ ವೀಕ್ಷಣೆ ಮಾಡುವ ಸಂದರ್ಭದಲ್ಲಿ ನಮಗೆ ವಿಭಿನ್ನ ರೀತಿಯ ಬೋಧನಾ ವಿಧಾನಗಳು ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಪರಿಣಾಮಕಾರಿಯಾಗಿರುವ ಬಗ್ಗೆ ಅರಿವಿಗೆ ಬಂದಿರುತ್ತದೆಯಲ್ಲವೇ? ಈ ವಿಧಾನಗಳ ಯಶಸ್ಸು ಮತ್ತು ಅನುಷ್ಠಾನ, ಶಿಕ್ಷಕರ ಕೌಶಲ್ಯ ಮತ್ತು ವಿದ್ಯಾರ್ಥಿಯನ್ನು ಕಲಿಕೆಯಲ್ಲಿ ತೊಡಗಿಸುವ ಪ್ರೇರಣೆಯ ಮೇಲೆ ಅವಲಂಬಿತವಾಗಿದೆ ಎಂದು ಗುರುತಿಸಿಲ್ಲವೇಯೇ? ...........

ಆಧುನಿಕ ಬೋಧನಾ ವಿಧಾನಗಳು ವಿದ್ಯಾರ್ಥಿಗಳು ಕಲಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಲು, ಮತ್ತು ಅವರು ತಮ್ಮ ಸ್ವ ಕಲಿಕೆಯಲ್ಲಿ ಸಕ್ರಿಯ ಪಾತ್ರವನ್ನು ತೆಗೆದುಕೊಳ್ಳಲು ಅವಕಾಶಗಳನ್ನು ಸೃಷ್ಟಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ .

ನವೀನ ಶಿಕ್ಷಣಶಾಸ್ತ್ರವು ಶೈಕ್ಷಣಿಕ ಫಲಿತಾಂಶಗಳನ್ನು ಸುಧಾರಿಸಲು ಮತ್ತು ಸಮಾನ ಕಲಿಕೆಯನ್ನು ಉತ್ತೇಜಿಸಲು, ನೈಜ ಸಮಸ್ಯೆಗಳನ್ನು ಪರಿಹರಿಸಲು ತರಗತಿಯೊಳಗೆ ಹೊಸ ಬೋಧನಾ ತಂತ್ರಗಳು ಮತ್ತು ವಿಧಾನಗಳನ್ನು ಪೂರ್ವಭಾವಿಯಾಗಿ ಪರಿಚಯಿಸುವ ಪ್ರಕ್ರಿಯೆಯಾಗಿದೆ.




ವಿದ್ಯಾರ್ಥಿಗಳ ವಿವಿಧ ಆಸಕ್ತಿ, ಅಭಿರುಚಿಗಳು, ಸಾಮಾಜಿಕ ಹಿನ್ನಲೆ, ವೈವಿಧ್ಯಮಯ ಪರಿಸರ ಕಲಿಕೆಯ ವೇಗ ಮತ್ತು ಪ್ರಗತಿಯನ್ನು ಅವಲಂಭಿಸಿರುತ್ತದೆ. ಈ ಅಂಶಗಳನ್ನು ಆಧರಿಸಿ ವೈವಿಧ್ಯಮಯ ವಿದ್ಯಾರ್ಥಿಗಳನ್ನೊಳಗೊಂಡ

ತರಗತಿಗಳಿಗೆ ಹಾಗೂ ಬೋಧನಾ ವಿಷಯಗಳಿಗೆ ಅನುಗುಣವಾಗಿ ಬೋಧನಾ ವಿಧಾನಗಳನ್ನು ಗುರುತಿಸಿಕೊಳ್ಳಬೇಕಾಗುತ್ತದೆ.

ತರಗತಿ ವೀಕ್ಷಣೆ ಸಂದರ್ಭದಲ್ಲಿ ಹೊಸತನದಿಂದ ಕೂಡಿದ ಬೋಧನಾ –ಕಲಿಕಾ ವಿಧಾನಗಳನ್ನು ನೀವು ಗಮನಿಸಿದ್ದೀರಾ? ಮಕ್ಕಳ ಮತ್ತು ಶಿಕ್ಷಕರ ಚಟುವಟಿಕೆಗಳಲ್ಲಿ ಏನಾದರೂ ಬದಲಾವಣೆಗಳನ್ನು ಗುರುತಿಸಿದ್ದೀರಾ?

**NCERT ನಿರ್ದೇಶಿತ ನವೀನ ಬೋಧನಾ ವಿಧಾನಗಳು**



## 2.3 ಕಲಿಕಾ ಸ್ನೇಹಿ ತರಗತಿಗೆ ನವೀನ ಬೋಧನಾ ವಿಧಾನಗಳು :


. ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರು ನಡೆಸುವ ಚಟುವಟಿಕೆಗಳಾದ ವಿವರಣೆ, ಪ್ರಶ್ನಿಸುವಿಕೆ, ಪ್ರದರ್ಶಿಸುವಿಕೆ, ಉತ್ತೇಜಿಸುವಿಕೆ ಇತ್ಯಾದಿ ಚಟುವಟಿಕೆಗಳು. ಅದೇ ರೀತಿ ವಿದ್ಯಾರ್ಥಿಯು ನಡೆಸುವ ಚಟುವಟಿಕೆಗಳಾದ ಆಲಿಸುವಿಕೆ ಗ್ರಹಿಸುವಿಕೆ ಪ್ರಶ್ನಿಸುವಿಕೆ ಚಟುವಟಿಕೆಗಳಲ್ಲಿ ತೊಡಿಸಿಕೊಳ್ಳುವಿಕೆ ಇತ್ಯಾದಿ ಒಟ್ಟು ಚಟುವಟಿಕೆಗಳನ್ನು ಒಳಗೊಂಡಿದೆ. ತರಗತಿಗಳ ಈ ಚಟುವಟಿಕೆಗಳು ಕಲಿಕಾ ಸ್ನೇಹಿಯಾಗಿರಲು ಎರಡು ಪ್ರಧಾನ ಅಂಶಗಳು ಕಾರಣ ಎನಿಸುತ್ತವೆ. ಒಂದು ಭಯ-ಆತಂಕರಹಿತ ಕೋಣೆಗಳು ಇನ್ನೊಂದು ತರಗತಿಯಲ್ಲಿ ನಡೆಯುವ ಕಲಿಕಾ ಪ್ರಕ್ರಿಯೆಗಳು .

ತರಗತಿ ಪ್ರಕ್ರಿಯೆ ಶಿಶು ಕೇಂದ್ರೀತವಾದಾಗ ಸ್ವಾಭಾವಿಕವಾಗಿ ಕಲಿಕೆ ಬೇಸರ ಅಥವಾ ಹೊರೆ ಅನಿಸುವುದಿಲ್ಲ ಬದಲಾಗಿ ಮಕ್ಕಳು ಸಂಪೂರ್ಣವಾಗಿ ಸಂತಸದಿಂದ ತೊಡಗಿಕೊಳ್ಳಲು ಕಾರಣವಾಗುತ್ತದೆ. ಕಲಿಕೆಯ ಮೇಲೆ ಮಕ್ಕಳ ಅವಧಾನ ಕೇಂದ್ರೀಕೃತವಾಗುತ್ತದೆ. ಮಗು ಸ್ನೇಹಿ ಕಲಿಕಾ ಪರಿಸರಕ್ಕೆ ಶಿಕ್ಷಕರು ವಿಭಿನ್ನ ಬೋಧನಾ ವಿಧಾನಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ಕಲಿಕಾ ಸ್ನೇಹಿ ತರಗತಿಗಾಗಿ ಶಿಕ್ಷಕರು ಬಳಸಿಕೊಳ್ಳುವ ಬೋಧನಾಕ್ರಮಗಳನ್ನು ಹೀಗೆ ಉಲ್ಲೇಖಿಸಬಹುದೇ? ಒಂದು ಬೋಧನಾ ಕ್ರಮದಲ್ಲಿ ಹಲವಾರು ಬೋಧನಾ ವಿಧಾನಗಳನ್ನು ಶಿಕ್ಷಕರು ಸನ್ನಿವೇಶ ಮತ್ತು ವಿಷಯಕ್ಕೆ ಅನುಗುಣವಾಗಿ ಬಳಸಿಕೊಳ್ಳತ್ತಾರೆ. ಒಂದು ನಿರ್ದಿಷ್ಟ ಬೋಧನೆ ತಂತ್ರವನ್ನು ನಿರ್ದಿಷ್ಟ ಸನ್ನಿವೇಶದಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ ವಿದ್ಯಾರ್ಥಿ ಅಭಿಪ್ರಾಯ ಅಥವಾ ತಿಳಿವಳಿಕೆಯನ್ನು ಅರಿಯಲು ಪ್ರಶ್ನಿಸಲಾಗುತ್ತದೆ. ಮಕ್ಕಳ ಅವಧಾನವನ್ನು ಕೇಂದ್ರೀಕರಿಸಲು ಅವಧಾನ ಕೇಂದ್ರೀಕರಣ ತಂತ್ರಗಳನ್ನು ಬಳಸಲಾಗುತ್ತದೆ. ಒಂದು ವಿಷಯವನ್ನು ಮಕ್ಕಳಿಗೆ ತಿಳಿಸಲು ವಿವರಣೆ ತಂತ್ರಗಳನ್ನು ಬಳಸಲಾಗುತ್ತದೆ. ಈ ತಂತ್ರಗಳೇ ಬೋಧನಾ ಕೌಶಲಗಳಾಗಿವೆ.

ಹಲವಾರು ಬೋಧನಾ ಕೌಶಲಗಳ ಒಂದು ಗುಚ್ಛವೇ ಒಂದು ಬೋಧನಾ ವಿಧಾನ. ಉಪನ್ಯಾಸ ವಿಧಾನದಲ್ಲಿ ಹಲವಾರು ತಂತ್ರಗಳಿವೆ ವಿವರಣೆ, ಪ್ರಶ್ನಿಸಿಕೊಳ್ಳುವುದು ಉದಾಹರಣೆ ಕೊಡುವುದು, ಅಭಿನಯಿಸುವುದು ಇತ್ಯಾದಿ. ಅದ್ಯಾಗು ವಿವರಣೆ ನೀಡುವ ಕೌಶಲ್ಯ ಎಲ್ಲಿ ಪ್ರಧಾನವಾಗಿ ಬಳಸಲ್ಪಡುತ್ತದೆ ಹಾಗೆ ಚಟುವಟಿಕೆ ವಿಧಾನದಲ್ಲಿ ಹಲವಾರು ಬೋಧನಾ ಕೌಶಲಗಳಿದ್ದಾಗ ಚಟುವಟಿಕೆಯನ್ನು ಮಾಡುವ ತಂತ್ರವೇ ಪ್ರಧಾನವಾಗಿರುತ್ತದೆ. ಯಾವ ತಂತ್ರ ಪ್ರಧಾನವು ಆ ತಂತ್ರದ ಹೆಸರಿನಿಂದ ಒಂದು ಬೋಧನಾ ವಿಧಾನವನ್ನು ಗುರುತಿಸುತ್ತಾರೆ. ಒಂದು ಬೋಧನಾ ಕ್ರಮದಲ್ಲಿ

ಹಲವಾರು ಬೋಧನಾ ವಿಧಾನಗಳು ಬಳಸಲ್ಪಡುತ್ತವೆ. ಶಿಶು ಕೇಂದ್ರಿತ ಕ್ರಮ ಎಂದು ಕರೆಯುವಾಗ ಅಲ್ಲಿ ಅನೇಕ ವಿಧಾನಗಳು ಒಳಗೊಳ್ಳುತ್ತವೆ.



**ಶಿಶು ಕೇಂದ್ರಿತ ಬೋಧನಾ ವಿಧಾನಗಳು ಮಕ್ಕಳ ಭಾಗವಹಿಸುವಿಕೆಯನ್ನು ಖಾತ್ರಿಪಡಿಸುತ್ತವೆ ಮತ್ತು ಭಾಗವಹಿಸುವಿಕೆಯು ಕಲಿಕೆಯಾಗುವುದನ್ನು ಖಾತ್ರಿಪಡಿಸುತ್ತದೆ.**

**ಈ ಕುರಿತು ಒಮ್ಮೆ ಯೋಚಿಸಿ......................**

**ನಲಿಕಲಿ ಶಿಶುಸ್ನೇಹಿ ಕಲಿಕಾ ವಿಧಾನಗವಾಗಿದೆ ಎಂದು ನೀವು ಖಾತ್ರಿಪಡಿಸುತ್ತೀರಾ?**

ನಲಿ ಕಲಿ ತರಗತಿಗಳ ಕಲಿಕೆ ಬೋಧನೆಯ ವಿನ್ಯಾಸವು ಚಟುವಟಿಕೆ ಪ್ರಧಾನವಾಗಿರುವಂತೆ ಜೋಡಿಸಲ್ಪಟ್ಟಿದೆ ಹಾಗಾಗಿ ನಲಿ-ಕಲಿ ಗೊತ್ತು ಪಡಿಸುವ ಕಲಿಕೆಯ ಮಾದರಿಯನ್ನು ಬಳಸುವುದರಿಂದ ತರಗತಿ ಸ್ವಾಭಾವಿಕವಾಗಿ ಚಟುವಟಿಕೆಯುಕ್ತವಾಗಿರುತ್ತದೆ. ಇದು ಕಲಿಕೆಗಷ್ಟೇ ಸೀಮಿತವಾಗಿರದೆ ಮೌಲ್ಯಮಾಪನವನ್ನು ಒಳಗೊಂಡಿದೆ ಮಗುವಿನ ಕಲಿಕೆ ಕೊರತೆ ಮತ್ತು ಸಮರ್ಥತೆಯನ್ನು ಬಿಂಬಿಸುತ್ತದೆ. ಇದು ಶಿಶು ಕೇಂದ್ರಿತ ವಿಧಾನಕ್ಕೆ ಒಂದು ಸರಳ ಕ್ರಮವಾಗಿದೆ.

ಹಿರಿಯ ತರಗತಿಗಳಲ್ಲಿ ಒಂದು ಬೋಧನಾ ಕ್ರಮ ಹಲವಾರು ಬೋಧನಾ ವಿಧಾನಗಳಿಂದ ಕೂಡಿರುತ್ತದೆ ಏಕೆಂದರೆ ವೈವಿಧ್ಯಮಯ ವಿದ್ಯಾರ್ಥಿಗಳ ಸಮೂಹ ತರಗತಿಗಳಾಗಿರುತ್ತವೆ ಹೀಗಾಗಿ ಯಾವುದೇ ಒಂದು ಬೋಧನಾ ವಿಧಾನವು ಎಲ್ಲಾ ಕಲಿಕಾಂಶಗಳನ್ನು ಕಲಿಯಲು ಉಪಯುಕ್ತವಾಗಿದೆ ಎನ್ನುವುದು ಅಷ್ಟೊಂದು ಸಮಂಜಸವಲ್ಲ. ಹೀಗಾಗಿ ಅನೇಕ ಬೋಧನಾ ವಿಧಾನಗಳು ತರಗತಿಗಳಲ್ಲಿ ಬಳಸಲ್ಪಡಬೇಕಲ್ಲವೇ? ಹೌದು ಏಕೆಂದರೆ ವಿದ್ಯಾರ್ಥಿಗಳಲ್ಲಿ ಕಂಡು ಬರುವ ಕಲಿಕೆಯ ಭಿನ್ನತೆ ಮತ್ತು ಕಲಿಕಾಂಶಗಳಲ್ಲಿ ಕಂಡು ಬರುವ ವೈವಿಧ್ಯತೆಯನ್ನು ಸ್ಪಂದಿಸಲು ನೆರವಾಗುತ್ತದೆ.

## 2.4 ಯೋಜನಾ ಆಧಾರಿತ ಕಲಿಕಾ ವಿಧಾನ : (Project Based Learning Method )

ಯೋಜನಾ ಆಧಾರಿತ ಕಲಿಕೆಯಲ್ಲಿ ಮಕ್ಕಳು ಪರಿಕಲ್ಪನೆಗಳನ್ನು ತಮ್ಮ ಪರಿಸರದ ಮೂಲಕ ಕಲಿಯುವುದರಿಂದ ಅದನ್ನು ಭವಿಷ್ಯದಲ್ಲಿ ಅನ್ವಯಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿವೆ. ಯಾಕೆಂದರೆ ಇಲ್ಲಿ ಅನುಭವದ ಮೂಲಕ ಕೌಶಲ್ಯಾಧಾರಿತ ಜ್ಞಾನವನ್ನು ಮಗು ಕಟ್ಟಿಕೊಳ್ಳುತ್ತದೆ. ತಂಡದಲ್ಲಿ ಕೆಲಸ ಮಾಡುವ, ತಂಡವನ್ನು ಮುನ್ನಡೆಸುವ, ವಿಷಯವನ್ನು ಆಯ್ಕೆ ಮಾಡುವ, ಸ್ವತಂತ್ರ ತೀರ್ಮಾನಗಳನ್ನು ಕೈಗೊಳ್ಳುವ ಮುಂತಾದ ಕೌಶಲ್ಯಗಳನ್ನು ಕಲಿಯುತ್ತಾರೆ. ಇದು ಸಂಪೂರ್ಣವಾಗಿ ತರಗತಿ ಹೊರಗಿನ ಕಲಿಕೆಯಾಗಿದ್ದು, ಸಂಘಪರತೆ, ಸಹಕಾರಗಳು ಪರಸ್ಪರರಲ್ಲಿ ಮೂಡುತ್ತವೆ. ಆದ್ದರಿಂದ ಇದು ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ಕಲಿಕೆಯೂ ಆಗಿದೆ.

**ಹಿನ್ನೆಲೆ :** ಇತ್ತೀಚಿನ ವರ್ಷಗಳಲ್ಲಿ ಯೋಜನಾ ಕಲಿಕೆ(ಪ್ರೊಜೆಕ್ಟ್ ಲರ್ನಿಂಗ್)ಯು ಹೆಚ್ಚು ಪ್ರಚಲಿತದಲ್ಲಿದೆ. ಜೆ.ಎ.ಸ್ಟೀವನ್‌ಸನ್ ಎಂಬುವವರು ಯೋಜನಾ ಆಧಾರಿತ ಕಲಿಕೆಯನ್ನು ರೂಪಿಸಿದರು. 1920ರಲ್ಲಿ ಪ್ರೋ.ಕಿಲ್‌ಪ್ಯಾಟ್ರಿಕ್ ಅವರು ಜಾರಿಗೆ ತಂದರು. ಹಾಗಾಗಿ ಕಿಲ್‌ಪ್ಯಾಟ್ರಿಕ್ ಅವರನ್ನು "ಯೋಜನಾ ಪದ್ಧತಿಯ ಜನಕ" ಎಂದು ಕರೆಯಲಾಗುತ್ತದೆ. ಒಂದು ನಿರ್ದಿಷ್ಟ ಪರಿಕಲ್ಪನೆಯನ್ನು ಕಾರ್ಯಾಚರಣೆ ಮೂಲಕ ಕಲಿಯುವುದೇ ಯೋಜನಾ ಕಲಿಕೆಯಾಗಿದೆ. ಈ ವಿಧಾನದಲ್ಲಿ ಕಲಿಕಾರ್ಥಿಯು ನೇರವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳುತ್ತಾನೆ.

ಪ್ರಶ್ನಿಸುವುದನ್ನೇ ಕೇಂದ್ರವನ್ನಾಗಿಟ್ಟುಕೊಂಡ ಯೋಜನಾ ಕಲಿಕೆಯು ವಿದ್ಯಾರ್ಥಿ ಕೇಂದ್ರಿತ ಕಲಿಕಾ ಪದ್ಧತಿಯಾಗಿದೆ. ತರಗತಿ ಹೊರಗಿನ ಕಲಿಕೆಯನ್ನು ತರಗತಿ ಕೋಣೆಗೆ ಅನ್ವಯಿಸಿಕೊಳ್ಳಲು ಇದು ಪ್ರಭಾವಿಯುತ ಕಲಿಕಾ ವಿಧಾನವಾಗಿದೆ.

ಕಲಿಕೆ ಮಕ್ಕಳಿಗೆ ಹೊರೆಯಾಗಬಾರದು ಮತ್ತು ಒತ್ತಡವನ್ನು ಹೇರಬಾರದು ಎಂಬುದನ್ನು ಉತ್ತೇಜಿಸಿದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(ಎನ್.ಸಿ.ಎಫ್)-2005, ನಾಲ್ಕು ಮಾರ್ಗದರ್ಶಿ ತತ್ವಗಳನ್ನು ಪ್ರಸ್ತುತಪಡಿಸಿತು. ಅದರಲ್ಲಿ 'ಜ್ಞಾನಕ್ಕೂ ಶಾಲೆಯ ಹೊರ ವಾತಾವರಣಕ್ಕೂ ಸಂಬಂಧ ಕಲ್ಪಿಸುವುದು' ಪ್ರಮುಖವಾದದ್ದು. ಅಂದರೆ ಮಗು ತನ್ನ ಜ್ಞಾನವನ್ನು ತಾನೇ ಕಟ್ಟಿಕೊಳ್ಳುವಂತೆ ಮಾಡಬೇಕು ಎಂಬುದು ಎನ್.ಸಿ.ಎಫ್-2005ರ ಆಶಯವಾಗಿದೆ. ಈ ಆಶಯಕ್ಕೆ ಪೂರಕವಾದ ಯೋಜನಾ ಕಲಿಕೆಯು ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಲ್ಲಿ ಸಫಲವಾಗಿದೆ. ಮಗು ತನ್ನ ಸುತ್ತಲ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥ ಮಾಡಿಕೊಳ್ಳಲು ಪೂರಕ ಚಟುವಟಿಕೆಗಳನ್ನು ರೂಪಿಸುವುದು ಯೋಜನಾ ಕಲಿಕೆಯ ಉದ್ದೇಶವಾಗಿದೆ.

**ಪ್ರಸ್ತುತತೆ:**

ಎಂಟನೇ ತರಗತಿ ಓದುತ್ತಿರುವ ಗೀತಾಳಿಗೆ ವಿಜ್ಞಾನ ಶಿಕ್ಷಕರು ಏಕದಳ ಮತ್ತು ದ್ವಿದಳ ಧಾನ್ಯಗಳ ಚಿತ್ರಪಟ ತಯಾರಿಸಿಕೊಂಡು ಬರಲು ತಿಳಿಸಿದರು. ಗ್ರಾಮೀಣ ಪ್ರದೇಶದವಳಾದ ಗೀತಾ ಚಿತ್ರಗಳು ದೊರೆಯದೇ ಪರದಾಡಿದಳು. ಒಂಭತ್ತನೇ ತರಗತಿಯ ಸಂತೋಷನಿಗೆ ಕನ್ನಡ ಶಿಕ್ಷಕರು ಜಾನಪದ ಗೀತೆ ಮತ್ತು ಜಾನಪದ ಕಥೆಗಳ ಸಂಗ್ರಹ ಮಾಡಿಕೊಂಡು ಬರಲು ತಿಳಿಸಿದರು. ಪುಸ್ತಕಗಳಿಗಾಗಿ ಎಲ್ಲೆಡೆ ಹುಡುಕಾಡಿದ. ಎಲ್ಲೂ ಸಿಗಲಿಲ್ಲ. ಈ ಬಗ್ಗೆ ಇಬ್ಬರೂ ತಮ್ಮ ತಮ್ಮ ಪಾಲಕರಿಗೆ ಒತ್ತಾಯ ಹೇರತೊಡಗಿದರು. ನಾಲ್ಕಾರು ದಿನಗಳ ನಂತರ ಪಕ್ಕದ ಪೇಟೆಯಿಂದ ಪಾಲಕರು ಅವರಿಗೆ ಬೇಕಾದ ಸಾಮಗ್ರಿಗಳನ್ನು ತಂದು ಕೊಟ್ಟರು. ಆಗ ಇಬ್ಬರೂ ತಮ್ಮ ಯೋಜನಾ ಕಾರ್ಯ ಮುಗಿಸಿದರು.

ಯೋಜನಾ ಕಾರ್ಯ ಎಂದಕೂಡಲೇ ಬಹುತೇಕ ಪಾಲಕರಿಗೆ ಕಿರಿಕಿರಿ ಎನಿಸುತ್ತದೆ. ಸಂಗ್ರಹಿತ ಯೋಜನಾ ಕಾರ್ಯದಿಂದ ನಮ್ಮ ಮಕ್ಕಳು ಕಲಿಯುವುದೇನು? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇಂತಹ ಮಾಹಿತಿ ಸಂಗ್ರಹಿತ ಕಲಿಕೆಯು ಶಾಲಾ ಕಲಿಕೆಯ ಒಂದು ಭಾಗವಾಗಿದೆ. ಆದರೆ ಬಹುತೇಕ ಶಾಲೆಗಳಲ್ಲಿ ಇದು ಮೇಲಿನ ಸನ್ನಿವೇಶಗಳಂತೆ ಮಾಹಿತಿಗೆ ಮಾತ್ರ ಸೀಮಿತವಾಗಿದೆ. ಫಾತೀಮಾ ಚಿತ್ರಪಟ ತಯಾರಿಸುವ ಬದಲು ನೈಜ ಧಾನ್ಯಗಳನ್ನೇ ಸಂಗ್ರಹಿಸಿಕೊಂಡು ಹೋದರೆ ಅದೊಂದು ಉತ್ತಮ ಕಲಿಕೆಯಾಗುತ್ತಿತ್ತು. ಆಕಾಶ ಪುಸ್ತಕ ನೋಡಿ ಜಾನಪದ ಗೀತೆ ಮತ್ತು ಕಥೆ ಬರೆಯುವ ಬದಲು ತನ್ನ ಸುತ್ತಮುತ್ತಲಿನ ಜನರಿಂದ ಕೇಳಿ ಸಂಗ್ರಹಿಸುವಂತಾಗಿದ್ದರೆ ಅದೊಂದು ವಿಭಿನ್ನ ಸಂತಸದಾಯಕ ಕಲಿಕೆ ಆಗುತ್ತಿತ್ತು. ಉಳಿದವರಿಗಿಂತ ಇವರ ಮಾಹಿತಿಯು ನಿಖರ ಹಾಗೂ ಅರ್ಥಪೂರ್ಣವಾಗಿರುತ್ತದೆ.

**ಯೋಜನಾಧಾರಿತ ಕಲಿಕೆಯ ಲಕ್ಷಣಗಳು :**

- ಪ್ರಯೋಗಗಳು, ಸಂಶೋಧನೆ, ಉಪನ್ಯಾಸ, ಪುಸ್ತಕಗಳು ಹೀಗೆ ವಿವಿಧ ಮೂಲಗಳಿಂದ ಕಲಿಕೆ ಸಾಗುತ್ತದೆ.
- ವಿಷಯ ಸಂಗ್ರಹಣೆಯಲ್ಲಿ ವಯಸ್ಕರು, ಹಿರಿಯರು, ಅನುಭವಿಗಳೊಂದಿಗೆ ಚರ್ಚಿಸಿ ಕಲಿಯುತ್ತಾರೆ.
- ಯೋಜನೆಯ ಆಯ್ಕೆ, ಗುರಿ ಸಾಧನೆಗೆ ರೂಪಿಸುವ ಕಾರ್ಯಯೋಜನೆ, ಮುನ್ನಡೆಸುವ ಕಾರ್ಯತಂತ್ರಗಳು ಮುಂತಾದವುಗಳ ಬಗ್ಗೆ ಸ್ವತಃ ನಿರ್ಧಾರಣೆಯ ಮೂಲಕ ಮುಕ್ತ ಕಲಿಕೆ.
- ಸಮಸ್ಯೆಯ ಪರಿಹಾರಕ್ಕಾಗಿ ವಿವಿಧ ಕೌಶಲ್ಯಗಳ ಬಳಕೆ. ಜೀವನ ಅನುಭವವನ್ನು ಶಿಕ್ಷಣಕ್ಕೆ ಅನ್ವಯಿಸಿಕೊಳ್ಳುತ್ತಾರೆ.
- ಪರಿಕಲ್ಪನೆಗಳ ಆಧಾರಿತ ಶಾಶ್ವತ ಕಲಿಕೆ.
- ವಿವಿಧ ಸನ್ನಿವೇಶಗಳಲ್ಲಿ ಕಲಿಕೆ ಸಾಗುವುದರಿಂದ ತರ್ಕಶಕ್ತಿ ಮತ್ತು ಶೋಧಕ ದೃಷ್ಟಿ ಬೆಳೆಯುತ್ತದೆ.

## ಶಿಕ್ಷಕರ ಸಹಭಾಗಿತ್ವ:



ಯೋಜನಾ ಕಲಿಕೆಯಲ್ಲಿ ಮಕ್ಕಳಷ್ಟೇ ಕಲಿಯುವುದಿಲ್ಲ. ಬದಲಾಗಿ ಶಿಕ್ಷಕರೂ ಕಲಿಯುತ್ತಾರೆ. ಶಿಕ್ಷಕರು ತಂಡದ ಒಬ್ಬ ಸದಸ್ಯರಾಗಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಹೊಸತನದ ಹರಿಕಾರರಾಗಲು ಸಾಧ್ಯ. ಶಿಕ್ಷಕರು ಇಲ್ಲಿ ಭೋದಕರಾಗುವುದರ ಜೊತೆಗೆ ಒಬ್ಬ ಮಾರ್ಗದರ್ಶಕರಾಗಿ, ಸಹಾಯಕರಾಗಿ, ಸ್ನೇಹಿತರಾಗಿ ತೊಡಗಿಕೊಳ್ಳಬೇಕು. ಯೋಜನೆಗೆ ಅಗತ್ಯವಿರುವ ಸಂಪನ್ಮೂಲ ಒದಗಿಸುವಲ್ಲಿ ಹಾಗೂ ದತ್ತಾಂಶ ಸಂಗ್ರಹಿಸುವಲ್ಲಿ ಮಕ್ಕಳಿಗೆ ಸಹಾಯ ಮಾಡಬೇಕು.

ಶಿಕ್ಷಕರು ಮಕ್ಕಳನ್ನು ಅಭಿಪ್ರೇರಿಸಿ ಯೋಜನಾ ಕಲಿಕೆಯಲ್ಲಿ ಕುತೂಹಲ ಕೆರಳಿಸಬೇಕು. ಯೋಜನೆಯು ಮುಖ್ಯವಾಗಿ ಮಕ್ಕಳ ಮಾನಸಿಕ, ಬೌದ್ಧಿಕ ಮತ್ತು ಪ್ರಾದೇಶಿಕ ಮಟ್ಟಕ್ಕನುಗುಣವಾಗಿ ಇರಬೇಕು. ಯೋಜನೆಯು ಪಠ್ಯದಾಚೆಗಿನ ಕಲಿಕೆಯನ್ನು ಪಠ್ಯಕ್ಕೆ ಪೂರಕವಾಗುವಂತೆ ಮಾಡುವಂತಿರಬೇಕು. ತಮಗೆ ಇಷ್ಟವಾದ ಯೋಜನೆ ಆಯ್ಕೆ ಮಾಡಲು ಮಕ್ಕಳಿಗೆ ಸ್ವಾತಂತ್ರ ನೀಡಬೇಕು. ತರಗತಿಯ ಎಲ್ಲಾ ಮಕ್ಕಳು ಪಾಲ್ಗೊಳ್ಳುವಂತೆ ಅವಕಾಶ ನೀಡಬೇಕು. ಯೋಜನಾ ಕಾರ್ಯವನ್ನು ನಿರಂತರವಾಗಿ ವೀಕ್ಷಿಸುತ್ತಾ ಮಾರ್ಗದರ್ಶನ ನೀಡಬೇಕು. ಮಾಹಿತಿ ಸಂಗ್ರಹಣೆಗಾಗಿ ಅಗತ್ಯ ಸಂಪನ್ಮೂಲ ಒದಗಿಸಬೇಕು. ಯೋಜನೆ ಕುರಿತು ಚರ್ಚಿಸಲು ಮತ್ತು ವಿಚಾರಗಳನ್ನು ಹಂಚಿಕೊಳ್ಳಲು ಸೂಕ್ತ ವೇದಿಕೆ ನಿರ್ಮಿಸಬೇಕು. ಹಿರಿಯರು, ಅನುಭವಿಗಳೊಂದಿಗೆ ಮಕ್ಕಳು ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸಬೇಕು. ಅಂತಿಮವಾಗಿ ಯೋಜನಾ ವರದಿ ತಯಾರಿಸಲು ಮಾರ್ಗದರ್ಶನ ಮಾಡಬೇಕು.

ಮಕ್ಕಳು ತಯಾರಿಸಿದ ಯೋಜನೆಗಳನ್ನು ಸಭೆ ಸಮಾರಂಭಗಳಂದು ಪ್ರದರ್ಶನಕ್ಕೆ ವ್ಯವಸ್ಥೆಗೊಳಿಸಬೇಕು. ಅಲ್ಲಿ ಮಕ್ಕಳು ತಮ್ಮ ಯೋಜನಾ ವರದಿಯ ಬಗ್ಗೆ ವೀಕ್ಷಕರಿಗೆ ವಿವರಣೆ ನೀಡಬೇಕು. ಉತ್ತಮ ಯೋಜನಾ ವರದಿಗಳನ್ನು ಆಯ್ಕೆ ಮಾಡಿ ಸ್ಥಳೀಯ ಪ್ರಾಯೋಜಕರಿಂದ ಪ್ರಶಂಸೆ ನೀಡಬೇಕು. ಈ ಯೋಜನಾ ವರದಿಗಳನ್ನು ಅವಶ್ಯಕತೆ ಇದ್ದಾಗ ತರಗತಿ ಕೋಣೆಯಲ್ಲಿ ಬೋಧನೋಪಕರಣವಾಗಿ ಬಳಸಬೇಕು.

**ಪೋಷಕರ ಪಾತ್ರ:** ಯೋಜನಾ ಕಲಿಕೆಯಲ್ಲಿ ಪೋಷಕರ ಪಾತ್ರ ಮಹತ್ವದ್ದು. ಮಕ್ಕಳು ಯೋಜನೆಗಳನ್ನು ತಯಾರಿಸಿಲು ಪೋಷಕರು ಸಹಾಯ ಮಾಡಬೇಕು. ಇದರಿಂದ ತಾವೂ ಕಲಿಕೆಯಲ್ಲಿ ಭಾಗವಹಿಸಿದಂತಾಗುತ್ತದೆ. ಅಗತ್ಯ ಸಂಪನ್ಮೂಲ ಒದಗಿಸಲು ಮುಂದಾಗಬೇಕು. ಮಕ್ಕಳ ಕಲಿಕೆಯನ್ನು ಉತ್ತೇಜಿಸುತ್ತಾ ಅವರ ವ್ಯಕ್ತಿತ್ವ ನಿರ್ಮಾಣದಲ್ಲಿ ಭಾಗಿಯಾಗಬೇಕು. ಯೋಜನಾ ಕಲಿಕೆಯು ತರಗತಿ ಹೊರಗೆ ನಡೆಯುವುದರಿಂದ ಶಿಕ್ಷಕರ ಸ್ಥಾನವನ್ನು ಪೋಷಕರು ವಹಿಸಿಕೊಳ್ಳಬೇಕು. ಮಕ್ಕಳ ಕಲಿಕೆಯಲ್ಲಿ ಪೋಷಕರೂ ಭಾಗಿಯಾದಾಗ ಅವರು ತುಂಬಾ ಖುಷಿ ಪಡುತ್ತಾರೆ. ಮಕ್ಕಳ ಖುಷಿಯಲ್ಲಿ ನಮ್ಮ ನೋವನ್ನು ಮರೆಯಬಹುದು ಅಲ್ಲವೇ?

## ಯೋಜನೆ ೧- ಮಕ್ಕಳಿಗಾಗಿ ಕೃಷಿ ಪಾಠ

### ಕೃಷಿ ದರ್ಶನ ಮಾಡಿದ ಚಿಣ್ಣರು , ಶಾಲಾ ಮಕ್ಕಳಿಗೆ ಕೃಷಿ ಪಾಠ

ಶೇಂಗಾ ಸಸ್ಯ ಭೂಮಿಯ ಮೇಲ್ಭಾಗದಲ್ಲಿ ಹೂ ಬಿಟ್ಟು ನೆಲದಲ್ಲಿ ಕಾಯಿ ಅಗುತ್ತದೆ ಹೇಗೆ? ಹತ್ತಿಯ ಬಣ್ಣ ಯಾವಾಗಲೂ ಬಿಳಿ ಏಕೆ? ಜೇನು ಹುಳುಗಳು ಏನು ತಿನ್ನುತ್ತವೆ? ಅಡುಗೆಗೆ ಹಾಕುವ ಎಣ್ಣೆಯನ್ನು ವಾಹನಗಳಿಗೆ ಉಪಯೋಗಿಸಲು ಸಾಧ್ಯವಿಲ್ಲವೇ? ತೆಂಗಿನಕಾಯಿಯಲ್ಲಿರುವ ಎಳೆನೀರು, ಕೊಬ್ಬರಿ ಹೇಗೆ ಆಗುತ್ತದೆ? ಮೆಣಸಿನಕಾಯಿ ಖಾರ ಏಕೆ? ಬಾಸುಮತಿ ಅಕ್ಕಿಯನ್ನು ಕರ್ನಾಟಕದ ಎಲ್ಲ ಭಾಗಗಳಲ್ಲೂ ಬೆಳೆಯಲು ಸಾಧ್ಯವಿಲ್ಲವೇ?

ಅಬ್ಬಬ್ಬ! ಈ ಚಿಣ್ಣರ ಪ್ರಶ್ನೆಗಳಿಗೆ ಕೊನೆಯೇ ಇರಲಿಲ್ಲ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಬೆಸ್ತು ಬಿದ್ದಿದ್ದರು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ವಿಭಾಗದ ಅಧಿಕಾರಿಗಳಾದ ಡಾ.ಎಸ್.ಜಿ. ಭೂತಿ.

ಈ ಪ್ರಶ್ನೆಗಳು ಇವರಿಗೆ ತೂರಿ ಬಂದಿದ್ದು ಚಿಣ್ಣರ ಕೃಷಿ ದರ್ಶನದಲ್ಲಿ. ಸರ್ವ ಶಿಕ್ಷಣ ಅಭಿಯಾನ ೨೦೧೨-೧೩ನೇ ಸಾಲಿನ ಆವಿಷ್ಕೃತ ಚಟುವಟಿಕೆಯಡಿಯಲ್ಲಿ ರಾಜ್ಯದಲ್ಲಿ ಪ್ರಥಮ ಬಾರಿಗೆ ಚಿಣ್ಣರ ಕೃಷಿ ವೃತ್ತಿ ದರ್ಶನ ಚಟುವಟಿಕೆಯನ್ನು ಅನುಷ್ಠಾನಕ್ಕೆ ತಂದಿದೆ. ಇದರ ಅಂಗವಾಗಿ ಧಾರವಾಡ ಜಿಲ್ಲೆಯ ಚಿಣ್ಣರು ಇಲ್ಲಿನ ಪ್ರಮುಖ ಕೃಷಿ ಪ್ರವಾಸಿ ತಾಣ ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಕುತೂಹಲಕಾರಿ ಪ್ರಶ್ನೆಗಳ ಮೂಲಕ ಅಲ್ಲಿನ ಅಧಿಕಾರಿಗಳನ್ನು ಸುಸ್ತು ಹೊಡೆಸಿದ್ದಾರೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣ ಕಳೆದ ಹದಿನೈದು ದಿನಗಳಿಂದ ಚಿಣ್ಣರ ಕಲರವದಿಂದ ಕೂಡಿದ್ದು, ಧಾರವಾಡ ಜಿಲ್ಲೆಯ ಒಟ್ಟು ಹತ್ತು ಸಾವಿರ ಮಕ್ಕಳಿಗೆ ಕೃಷಿ ದರ್ಶನದ ಅವಕಾಶವಿದ್ದು ಈಗಾಗಲೇ ೫೦೦೦ ಕ್ಕೂ ಹೆಚ್ಚು ಮಕ್ಕಳು ಭೇಟಿ ನೀಡಿದ್ದಾರೆ. ಕೃಷಿ ಸೂಕ್ಷ್ಮ ಶಾಸ್ತ್ರ ತಾಂತ್ರಿಕತೆ, ಗೃಹವಿಜ್ಞಾನ, ಬೇಸಾಯ ಶಾಸ್ತ್ರ, ಕೃಷಿ ಅರಣ್ಯ ಶಾಸ್ತ್ರ, ಮಣ್ಣುವಿಜ್ಞಾನ, ಪರಿಸರ ವಿಜ್ಞಾನ, ತೋಟಗಾರಿಕೆ, ಬೀಜವಿಜ್ಞಾನ, ಬೆಳೆ ಶರೀರ ಶಾಸ್ತ್ರ, ಕಳೆ ನಿಯಂತ್ರಣ, ಕೃಷಿ ಅರ್ಥ ಶಾಸ್ತ್ರ, ಹೀಗೆ ವಿವಿಧ ವಿಭಾಗಗಳಿಗೆ ಮಕ್ಕಳು ಓಡಾಡಿಕೊಂಡು ಅಂಕಿ ಅಂಶ, ಮಾಹಿತಿ ಸಂಗ್ರಹಿಸುವುದು ಕಂಡುಬಂದಿತು.

ಭಾರತ ದೇಶದ ಜೀವನಾಡಿಯಾದ ಕೃಷಿಗೆ ಸಂಬಂಧಿಸಿದಂತೆ ಜ್ಞಾನವನ್ನು ಪ್ರಾಯೋಗಿಕವಾಗಿ, ಹೆಚ್ಚು ಪರಿಣಾಮಕಾರಿಯಾಗಿ ಮಕ್ಕಳಿಗೆ ತಲುಪಿಸಿ ಕೃಷಿ ಸಂಪ್ರದಾಯವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕೆಂಬುದು ಇಲಾಖೆಯ ಆಶಯ. ಕೃಷಿ ಚಟುವಟಿಕೆಗಳಾದ ತೋಟಗಾರಿಕೆ, ರೇಷ್ಮೆ ತಯಾರಿಕೆ, ಸಾವಯವ ಕೃಷಿ, ಜೇನು ಸಾಕಾಣಿಕೆ, ಜೈವಿಕ ಇಂಧನ, ಕೋಳಿ ಸಾಕಾಣಿಗೆ, ಮೀನುಗಾರಿಕೆ, ಔಷಧಿ ಸಸ್ಯ, ಹಾಲಿನ ಉತ್ಪನ್ನಗಳು, ಮಳೆ ನೀರು ಕೊಯ್ಲು ಮುಂತಾದ ಬಹು ಕೌಶಲ್ಯಗಳನ್ನು ಎಳೆಯ ವಯಸ್ಸಿನಲ್ಲಿ ಪರಿಚಯಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.

ಜಿಲ್ಲೆಯ ಕೃಷಿ ಆಧಾರಿತ ಜನತೆಯ ಜನಜೀವನದ ಬಗ್ಗೆ ಲಭ್ಯವಿರುವ ಸಂಘಟಿತ ವ್ಯವಸ್ಥೆಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುತ್ತ ಅವರಲ್ಲಿ ಕೃಷಿ ವೈವಿಧ್ಯತೆಯ ಬಗ್ಗೆ ಚಿಂತನೆ ಮಾಡುವ ಸಾಮರ್ಥ್ಯ ಬೆಳೆಸುವುದು, ದೇಶದ ಬೆನ್ನೆಲುಬಾದ ರೈತನನ್ನು ಗೌರವದಿಂದ ಕಾಣುವ ಗುಣವನ್ನು ಬೆಳೆಸುವುದು ಕೃಷಿ ದರ್ಶನದ ಪ್ರಧಾನ ಆಶಯವಾಗಿದೆ.

ಶಾಲೆಗಳಲ್ಲಿ ಕೃಷಿ ಶಿಕ್ಷಣ ಕಡ್ಡಾಯವಾಗಲಿ ಎಂಬ ಚರ್ಚೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ೨೦೦೫ ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು(ಎನ್.ಸಿ.ಎಫ್) ಕೃಷಿಯನ್ನು ಪಠ್ಯದಲ್ಲಿ ಸೇರಿಸುವ ಹಲವಾರು ಅವಕಾಶಗಳನ್ನು ಒದಗಿಸಿದೆ. ಕೇವಲ ಇಂಜನೀಯರ್, ಡಾಕ್ಟರ್ ಆಗುವುದು ಶಿಕ್ಷಣದ ಉದ್ದೇಶ ಅಲ್ಲ,. ಒಬ್ಬ ಒಳ್ಳೆಯ ಕೃಷಿಕನಾಗಲು ಉತ್ತಮ ಡಿಗ್ರಿ ಹೊಂದುವ ಅವಶ್ಯಕತೆ ಇದ್ದು ವೃತ್ತಿಪರ ಆಸಕ್ತಿಗಳನ್ನು ಪ್ರೋತ್ಸಾಹಿಸಲು ಕೃಷಿ ದರ್ಶನ ಸಹಾಯಕವಾಗಲಿದೆ.

ಶೇ ೭೫ ವಿದ್ಯಾರ್ಥಿನಿಯರನ್ನೊಳಗೊಂಡಂತೆ ರಾಜ್ಯದ ೨,೫೦,೭೦೦ ಮಕ್ಕಳು ಈ ವರ್ಷ ಕೃಷಿ ದರ್ಶನ ಮಾಡಲಿದ್ದಾರೆ. ಮೂಲಭೂತ ಜ್ಞಾನದಿಂದ ವಂಚಿತರಾಗುತ್ತಿರುವ ಮಕ್ಕಳಿಗೆ ಇದೊಂದು ಸುವರ್ಣಾವಕಾಶ. ಹಾಲು, ಹಣ್ಣು, ಜೇನು ಮುಂತಾದ ವಸ್ತುಗಳು ಎಲ್ಲಿಂದ ಬರುತ್ತವೆ? ಇವುಗಳ ಮೂಲ ಯಾವುದು? ಎಂಬ ಪ್ರಶ್ನೆಗಳಿಗೆ ಉತ್ತರಿಸಲು

ಶಹರದ ಮಕ್ಕಳು ಅಸಮರ್ಥರಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಈ ದಿಶೆಯಲ್ಲಿ ಕೃಷಿ ದರ್ಶನ ಮಕ್ಕಳಿಗೆ ಪ್ರಾಯೋಗಿಕ ಅವಕಾಶವನ್ನು ನೀಡುತ್ತದೆ.

ಕೃಷಿಯಿಲ್ಲದೇ ಭಾರತ ದೇಶವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಆದರೆ ಹಲವಾರು ಕಾರಣಗಳಿಂದ ಕೃಷಿಯಿಂದ ವಿಮುಖವಾಗುತ್ತಿರುವ ರೈತ ತನ್ನ ಜಮೀನನ್ನು ಮಾರಾಟಕ್ಕೆ ಇಟ್ಟಿದ್ದಾನೆ. ತನ್ನ ಮಕ್ಕಳನ್ನು ಕೃಷಿಯಿಂದ ದೂರ ಇಡಲು ಬಯಸುತ್ತಿದ್ದಾನೆ. ಕೃಷಿ ದರ್ಶನದ ಮೂಲಕ ನಮ್ಮ ಚಿಣ್ಣರು “ನೇಗಿಲ ಕುಳದೊಳು ಅಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ” ಎಂದು ಅರ್ಥಮಾಡಿಕೊಂಡು ನಮ್ಮ ಕೃಷಿ ಸಂಸ್ಕೃತಿಯನ್ನು ಉಳಿಸಿದರೆ ಸಾಕು.

ಇಂದು ಟಿ.ವಿ ಮಾಧ್ಯಮ, ಕಂಪ್ಯೂಟರ್‌ಗಳು ನಮ್ಮ ಮಕ್ಕಳ ಓದನ್ನು ಕಸಿದುಕೊಂಡಿವೆ. ಇಂದಿನ ಮಕ್ಕಳು ಓದು ಮತ್ತು ಬರಹದಿಂದ ವಿಮುಖರಾಗುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಮಕ್ಕಳಲ್ಲಿ ಓದುವ ಸದಭಿರುಚಿ ಬೆಳೆಸುವುದು, ಗ್ರಂಥಾಲಯ ನಿರ್ವಹಿಸುವ ಕೌಶಲ್ಯದ ಜೊತೆಗೆ ಅದು ನಮ್ಮದು ಎಂಬ ಭಾವನೆ ಬೆಳೆಸುವುದು ಕಾರ್ಯಕ್ರಮದ ಉದ್ದೇಶವಾಗಿದ್ದು ಅದು ಈಗ ಸಫಲವಾಗಿದೆ.

ಹೀಗೆ ಸಂಗ್ರಹಿಸಿದ ಪುಸ್ತಕಗಳಿಂದ ಹಾಗೂ ಶಾಲೆಯಲ್ಲಿ ಧೂಳು ಹಿಡಿದಿದ್ದ ಹಳೆಯ ಪುಸ್ತಕಗಳಿಂದ ಪುಟ್ಟ ಗ್ರಂಥಾಲಯ ನಿರ್ಮಾಣವಾಗಿದೆ. ಸ್ವತಃ ಮಕ್ಕಳೇ ಈ ಗ್ರಂಥಾಲಯದ ಉಸ್ತುವಾರಿ ಮಾಡುತ್ತಾರೆ. ಶಾಲೆಯ ಬಿಡುವಿನ ಸಮಯದಲ್ಲಿ ತಮಗೆ ಬೇಕಾದ ಪುಸ್ತಕಗಳನ್ನು ಎರವಲು ಪಡೆದು ಓದುತ್ತಾರೆ. ಹೀಗೆ ಸಮಯದ ಸದುಪಯೋಗದ ಜೊತೆ ಜ್ಞಾನದ ಹಸಿವನ್ನು ನೀಗಿಸಿಕೊಳ್ಳುತ್ತಾರೆ. ಕಥೆ, ಹಾಡು, ಚುಟುಕು, ಶಿಕ್ಷಣ, ಕ್ರೀಡೆ, ವಿಜ್ಞಾನ ಹೀಗೆ ವಿವಿಧ ವಿಭಾಗಗಳಲ್ಲಿ ಪುಸ್ತಕಗಳನ್ನು ಸಂಗ್ರಹಿಸಿ ಇಡಲಾಗಿದೆ.

**ಯೋಜನೆ 2 -ಶಾಲೆಯಿಂದಲೇ ಆಕಾಶ ದರ್ಶನ (ಬಾಹ್ಯಾಕಾಶ ಖಗೋಳ ಪ್ರಯೋಗಾಲಯ)**

ಬೆಳಿಗ್ಗೆ ನೀಲಿಯಾಗಿ, ರಾತ್ರಿ ಹೊತ್ತು ಕಪ್ಪಾಗಿ ಗೋಚರಿಸುವ ಆಗಸ ಮಕ್ಕಳಿಗೆ ಒಂದು ಕುತೂಹಲದ ಜಗತ್ತನ್ನು ತೆರೆದಿಡುತ್ತದೆ. ಸಂಜೆಯಾಗುತ್ತಿದ್ದಂತೆ ಗ್ರಹ, ತಾರೆ, ನಕ್ಷತ್ರಗಳ ಮೆರವಣಿಗೆಯೇ ಹೊರಡುತ್ತದೆ. ಇವೆಲ್ಲವುಗಳ ನಡುವೆ ಚಂದ್ರನ ಕಲೆಗಳು ಮಕ್ಕಳನ್ನು ಆಕರ್ಷಿಸುತ್ತವೆ. ರಾತ್ರಿಯಾಗುತ್ತಿದ್ದಂತೆ ಮತ್ತೊಂದು ಹೊಸ ಜಗತ್ತಿನ

ಪರಿಚಯವಾಗುತ್ತದೆ. ಒಂದು ಚಿಕ್ಕ ಬಿಂದುವಿನಂತೆ ಕಾಣುವ ಆಕಾಶಕಾಯಗಳ ಬಗ್ಗೆ ವಿಜ್ಞಾನಿಗಳಿಂದ ನಿರಂತರವಾದ ಸಂಶೋಧನೆಗಳು ನಡೆಯುತ್ತಲೇ ಇವೆ. ಮಗುವೂ ಕೂಡ ಒಬ್ಬ ವಿಜ್ಞಾನಿಯೇ ಅಲ್ಲವೇ?

ಬುಧ, ಗುರು, ಶುಕ್ರ, ಮಂಗಳ ಗ್ರಹಕ್ಕೆ ಹಾಗೂ ಚಂದ್ರನೆಡೆಗೆ ಬೇರೆ ಬೇರೆ ದೇಶಗಳು ಉಪಗ್ರಹಗಳನ್ನು ಹಾರಿಬಿಡುವ ಮೂಲಕ ಅಲ್ಲಿನ ವಾತಾವರಣವನ್ನು ಅಭ್ಯಸಿಸುವ, ಅಲ್ಲಿ ವಸಾಹತುಗಳನ್ನು ಸ್ಥಾಪಿಸುವ ಸಾಧ್ಯತೆ ಮತ್ತು ಅವಕಾಶಗಳ ಕುರಿತು ಕಳೆದ ೫-೬ ದಶಕಗಳಿಂದ ಕೈಗೊಳ್ಳುತ್ತಿವೆ. ಭಾರತದಲ್ಲಿಯೂ ಕೂಡ ಚಂದ್ರಯಾನ ಮಂಗಳಯಾನದ ಸಾಧ್ಯತೆಗಳು ವಿಫುಲವಾಗಿವೆ. ಈ ಸಂದರ್ಭದಲ್ಲಿ ಶಾಲಾ ಹಂತದಿಂದಲೇ ಮಕ್ಕಳಿಗೆ ಬಾಹ್ಯಾಕಾಶ ಶಿಕ್ಷಣದ ಅನಿವಾರ್ಯತೆ, ಅವಶ್ಯಕತೆ ಎದುರಾಗಿದೆ.

ಈ ಹಿನ್ನಲೆಯಲ್ಲಿ ಶಾಲೆಗಳಲ್ಲಿ ಬಾಹ್ಯಾಕಾಶ ಪ್ರಯೋಗಾಲಯ ನಿರ್ಮಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಹೊಸ ಪ್ರಯೋಗವೆಂದೇ ಹೇಳಬಹುದು. ಕಲಿಕೆಯೆನ್ನುವುದು ಇಲ್ಲಿ ಬೆಳಿಗ್ಗೆ ೯ ರಿಂದ ಸಂಜೆ ೬ ರವರೆಗೆ ಸೀಮಿತವಾಗಿರದೇ ಸಂಜೆ, ರಾತ್ರಿ, ಮಧ್ಯರಾತ್ರಿ, ಬೆಳಗಿನ ಮುಂಜಾವಿಗೂ ಪ್ರಾಯೋಗಿಕ ಕಲಿಕೆ, ವೀಕ್ಷಣೆ, ಸಂಶೋಧನೆಗಳನ್ನು ಹಮ್ಮಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತದೆ.

**ಬಾಹ್ಯಾಕಾಶ ಪ್ರಯೋಗಾಲಯದ ಲಾಭಗಳು:**

*ಸೌರಮಂಡಲ ಗ್ರಹ, ತಾರೆ, ನಕ್ಷತ್ರ, ಉಪಗ್ರಹ, ಉಲ್ಕೆಗಳು, ದೂಮಕೇತು, ಕ್ಷುದ್ರಗ್ರಹಗಳು ಮುಂತಾದ ಆಕಾಶಕಾಯಗಳನ್ನು ಪ್ರಾಯೋಗಿಕವಾಗಿ ವೀಕ್ಷಿಸುವ ಅವಕಾಶಗಳನ್ನು ಇದು ಕಲ್ಪಿಸಿಕೊಡುತ್ತದೆ.

*ವಿಶ್ವದ ಅಂಚಿನವರೆಗೂ ದೂರದರ್ಶಕಗಳಲ್ಲಿ ಆಕಾಶವನ್ನು ವೀಕ್ಷಿಸುವ ಮೂಲಕ ಹಲವು ಮೌಢ್ಯತೆಗಳಿಗೆ ಕಾರಣವಾಗಿರುವ ರಾಹು, ಕೇತು ಗ್ರಹಗಳು ದೂರದರ್ಶಕದಲ್ಲಿ ಎಲ್ಲಿಯೂ ಇಲ್ಲ ಎಂಬ ಸತ್ಯವನ್ನು ಮಕ್ಕಳಿಗೆ ಮನದಟ್ಟು ಮಾಡಿಸುವ ಮೂಲಕ ಅವರನ್ನು ವಿಜ್ಞಾನದ ಚಿಂತನೆಗೆ ಹಚ್ಚುತ್ತದೆ.

*ಸೂರ್ಯಗ್ರಹಣ, ಚಂದ್ರಗ್ರಹಣಗಳು ನೈಸರ್ಗಿಕ ವಿದ್ಯಮಾನಗಳು ಎಂಬ ಅರಿವನ್ನು ನೀಡುವ ಮೂಲಕ ಅವುಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಹಾಗೂ ವೀಕ್ಷಣಾ ಕೌಶಲ್ಯ ಹೊಂದುವಂತೆ ಮಾಡುತ್ತದೆ.

*ಮಗು ವಿಶ್ವದ ಅಂಚಿನವರೆಗೂ ಆಕಾಶಕಾಯಗಳನ್ನು ವೀಕ್ಷಿಸುವ ಮೂಲಕ ಭೂಮಿಯ ಮೇಲೆ ತನ್ನ ಸ್ಥಾನ, ಹೊಣೆಗಾರಿಕೆ, ಇತಿಮಿತಿಗಳನ್ನು ಅರಿಯುವಂತೆ ಮಾಡುತ್ತದೆ.

*ಮಕ್ಕಳು ಬಾಹ್ಯಾಕಾಶಕ್ಕೆ ಸಂಬಂಧಿಸಿದ ವಿವಿಧ ಉಪಕರಣಗಳನ್ನು ಬಳಸುವ, ಜೋಡಿಸುವ ಸಾಮರ್ಥ್ಯ, ಕೌಶಲ್ಯಗಳನ್ನು ಹೊಂದುತ್ತಾರೆ.

*ಬೇರೆ ಬೇರೆ ಗ್ರಹಗಳಲ್ಲಿ ಭೌತಿಕ, ನೈಸರ್ಗಿಕ ವಾತಾವರಣವನ್ನು ಅಭ್ಯಸಿಸುತ್ತಾರೆ. ಗ್ರಹಗಳ ವಿವಿಧ ಉಪಗ್ರಹಗಳನ್ನು ಗುರುತಿಸುತ್ತಾರೆ. ಅವುಗಳ ಭ್ರಮಣೆ ಮತ್ತು ಪರಿಭ್ರಮಣೆಗಳನ್ನು ಅರಿತುಕೊಳ್ಳುತ್ತಾರೆ.

*ಬುಧ ಸಂಕ್ರಮಣ, ಶುಕ್ರ ಸಂಕ್ರಮಣಗಳನ್ನು ವೀಕ್ಷಿಸುವ ಅಪರೂಪದ ಅವಕಾಶಗಳನ್ನು ಇದು ಸೃಷ್ಟಿಸುತ್ತದೆ.

*ಮಕ್ಕಳು ವಿಜ್ಞಾನದ ಸಂಶೋಧನೆಗಳಿಗೆ ತೆರೆದುಕೊಂಡು ಅವರೂ ವಿಜ್ಞಾನಿಗಳಾಗುವತ್ತ ಮಾರ್ಗದರ್ಶಿಸುತ್ತದೆ.

*ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸದಲ್ಲಿ ವಿಜ್ಞಾನ, ತಂತ್ರಜ್ಞಾನ, ಖಗೋಳ ಶಾಸ್ತ್ರ ದ ವಿಷಯಗಳನ್ನು ಆಯ್ಕೆಮಾಡಲು ಪ್ರೋತ್ಸಾಹಿಸುತ್ತದೆ. ಮಕ್ಕಳಿಗೆ ಮೂಲವಿಜ್ಞಾನ ಕಲಿಯಲು ತಳಹದಿಯಾಗುತ್ತದೆ.

**ಬಾಹ್ಯಾಕಾಶ ಪ್ರಯೋಗಾಲಯದ ಇತಿಮಿತಿಗಳು**

* ಶಿಕ್ಷಕರಿಗೆ ಈ ಪ್ರಯೋಗಾಲಯವನ್ನು ನಿರ್ವಹಿಸುವ ಹೆಚ್ಚಿನ ತರಬೇತಿ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ.

* ಈ ಪ್ರಯೋಗಾಲಯದ ಜವಾಬ್ದಾರಿವಹಿಸಿಕೊಳ್ಳುವ ಶಿಕ್ಷಕರು ೨೪*೭ ಇದರಲ್ಲಿ ತೊಡಗಿಸಿಕೊಂಡು ಯಾವುದೇ ನೈಸರ್ಗಿಕ, ಖಗೋಳ ವಿದ್ಯಮಾನಗಳು ಜರುಗಿದಾಗ ಅದನ್ನು ವಿದ್ಯಾರ್ಥಿಗಳಿಗೆ ತಪ್ಪದೇ ತೋರಿಸುವ ಉತ್ಸಾಹ ಹೊಂದಿರಬೇಕಾಗುತ್ತದೆ.

* ಶಾಲಾ ಅವಧಿ ಇಲ್ಲಿ ಕೇವಲ ಬೆಳಿಗ್ಗೆ ೧೦ ರಿಂದ ೫ರವರೆಗೆ ಆಗಿರದೇ ಕೆಲವು ವಿಶೇಷ ಸಂದರ್ಭಗಳಲ್ಲಿ ಸಂಜೆ, ರಾತ್ರಿ, ಬೆಳಗಿನ ಜಾವ ಮಕ್ಕಳಿಗೆ ಆಕಾಶ ವೀಕ್ಷಣೆಯ ಅವಕಾಶಗಳನ್ನು ಸೃಷ್ಟಿಸಬೇಕಾಗುತ್ತದೆ.

* ಬಾಹ್ಯಾಕಾಶ ಉಪಕರಣಗಳು ಹೆಚ್ಚು ವೆಚ್ಚದಾಯಕವಾಗಿದ್ದು ಅವುಗಳನ್ನು ಕಾಯಲು, ಸುಸ್ಥಿತಿಯಲ್ಲಿಡಲು ಒಬ್ಬ ಶಾಲಾ ವಾಚಮನ್ ಅವಶ್ಯಕತೆ ಇರುತ್ತದೆ.

**ಒಂದು ಸನ್ನಿವೇಶ (ಶಾಲೆಯಲ್ಲಿ ಮಾಡಿರುವ ಪ್ರೊಜೆಕ್ಟ್ ವರ್ಕ್ ಕುರಿತು) ಸೇರಿಸುವುದು. ಉಲ್ಲೇಖಗಳನ್ನು ಕೋಟ್ ಮಾಡುವುದು.**

ಸಮಾಜವಿಜ್ಞಾನ ಶಿಕ್ಷಕರೊಬ್ಬರು ಇತಿಹಾಸ ಬೋಧನೆ ಸಮಯದಲ್ಲಿ ಹೀಗೊಂದು ಪ್ರೊಜೆಕ್ಟ ಆಧಾರಿತ ಕಲಿಕೆಗೆ ಪ್ರೇರಣೆ ನೀಡಿದ್ದಾರೆ. ಹರಪ್ಪ ಮೇಹೆಂಜೋದರ ಪಾಠದ ಉತ್ಪನ್ನನ ಆವಿಶೇಷಗಳ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳಿಗೆ ಸರಳವಾಗಿ ಅರ್ಥೈಸಲು ಹೀಗೆ ಮಾಡಿದರು.

ವಿದ್ಯಾರ್ಥಿಗಳು ತಮ್ಮ ಊರಿನ ಯಾವುದಾರೂ ಪುರಾತನ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಕಂಡು ಬರುವ ಅವಶೇಷಗಳ ಮಾಹಿತಿ/ಪರಿಚಯ/ದತ್ತಾಂಶಗಳನ್ನು ಕಲೆಹಾಕುವುದು. ಲಭ್ಯವಾದ ಅವಶೇಷಗಳ ಮೂಲಕ ತಮ್ಮ ಊರಿನ ಪುರಾತನದ ಸ್ಥಳದ ಕುರಿತು ವಿಶ್ಲೇಷಿಸಿ ದಾಖಲಿಸಿದರು . ಈ ಪ್ರಕ್ರಿಯೆಯನ್ನು ಶಿಕ್ಷಕರು ಹರಪ್ಪ ನಾಗರಿಕತೆಯ ಅವಶೇಷಗಳ ಉತ್ಪನನದ ಸಾಮ್ಯತೆಯ ಕುರಿತು ಚರ್ಚಿಸಿ ಫಲಿತಾಂಶವನ್ನು ದಾಖಲಿಸಿದರು.

ಗಣಿತ ವಿಷಯ ಬಂದಾಗ ಆಟದ ಮೈದಾನದ ವಿಸ್ತೀರ್ಣವನ್ನು ಗುಂಪಿನಲ್ಲಿ ಕಂಡುಹಿಡಿಬಹುದೇ? ಅದನ್ನು ಕಾಗದದ ಮೇಲೆ ಸಾಂಕೇತಿಕವಾಗಿ ಚಿತ್ರಿಸಬಹುದೇ? ಇಂಥ ಯೋಜನೆಗಳನ್ನು ಕೂಡ ನೀಡಬಹುದಾಗಿದೆಯಲ್ಲವೇ?

ಆಧುನಿಕ ಯಂತ್ರಗಳ ಬಗ್ಗೆ ಪರಿಚಯವಿರುವ ವಿದ್ಯಾರ್ಥಿಗಳು ವಿಜ್ಞಾನ ವಿಷಯದಲ್ಲಿ ಬರುವ ಯಂತ್ರಗಳ ಆವಿಷ್ಕಾರದ ಕುರಿತು ತರಗತಿಯಲ್ಲಿ ಬೊಧನಾ –ಕಲಿಕಾ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ಬಳಸುವ ಯಂತ್ರಗಳ ಪೂರ್ವ ಇತಿಹಾಸದ ಬಗ್ಗೆ ಯೋಜನಾ ಕಾರ್ಯವನ್ನು ನೀಡಬಹುದಾಗಿದೆ.

ಭಾಷೆಯಲ್ಲಿ ನಾಟಕ ಕಥೆಗಳು ಕಾದಂಬರಿಗಳು ಗದ್ಯ-ಪದ್ಯಗಳ ಸಾಹಿತ್ಯದ ಲೇಖಕರು ಮತ್ತು ಮೂಲಗಳನ್ನು ಕುರಿತು ಯೋಜನಾಧಾರಿತ ಕಲಿಕೆಗೆ ಅವಕಾಶ ನೀಡುವ ಮೂಲಕ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಜೀವನದಲ್ಲಿ ಆಸ್ಕರ್ ಪ್ರಶಸ್ತಿ ಪಡೆಯಬುದು.

ಪಠ್ಯಕ್ರಮ ಮೀರಿ ತರಗತಿಯ ಆಚೆ ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗೆ ಪ್ರಾಜೆಕ್ಟ್ ಆಧಾರಿತ ಕಲಿಕೆಯು ಉತ್ತಮ ವಿಧಾನವಾಗಿದೆ.

**ಯೋಜನಾ ಆಧಾರಿತ ಕಲಿಕೆಯು ವಿದ್ಯಾರ್ಥಿಗಳಲ್ಲಿ ಈ ಕಲಿಕೆಯನ್ನುಂಟುಮಾಡುತ್ತದೆ,**

1. ಸೃಜನಾತ್ಮಕವಾಗಿ ಸಮಸ್ಯೆಯನ್ನು ಪರಿಹರಿಸುವ ಕೌಶಲ.
2. ಸಹಯೋಗದೊಂದಿಗೆ ಕಲಿಕೆ.
3. ಸ್ವತಂತ್ರ ಕಲಿಕೆ ಮತ್ತು ಯೋಜನಾ ನಿರ್ವಹಣೆ ಕೌಶಲಗಳನ್ನು ನಿರ್ಮಿಸುವ ಬಗೆಗಳು
4. ಸಂಪನ್ಮೂಲಗಳನ್ನು ಹುಡುಕುವ, ,ಸಂವಹನ ಮಾಡುವ, ಅಂತಿಮ ಫಲಿತಾಂಶಕ್ಕಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಜ್ಞಾನ ಸಂರಚನೆ.
5. ಸ್ಪಷ್ಟವಾದ, ಉತ್ತಮವಾಗಿ ವ್ಯಾಖ್ಯಾನಿಸಲಾದ ಮೌಲ್ಯಮಾಪನ ಮಾನದಂಡಗಳನ್ನು ಅನುಸರಿಸುತ್ತಾರೆ.
6. ಅನುಭವಾತ್ಮಕ ಕಲಿಕೆ.

## 2.5 ಕ್ಷೇತ್ರ ಅಧ್ಯಯನ (Field trips)

ಯೋಜನಾ ವಿಧಾನದಲ್ಲಿ ಕ್ಷೇತ್ರ ಅಧ್ಯಯನವು ಒಳೊಂಡಿದೆ. ಕ್ಷೇತ್ರ ಅಧ್ಯಯನವನ್ನು ಕಲಿಕೆ ದೃಢೀಕರಣಕ್ಕಾಗಿ ಕೈಗೊಳ್ಳುತ್ತೇವೆ ಉದಾಹರಣೆಗೆ ಬ್ಯಾಂಕು, ಕಾರ್ಖಾನೆ, ಧಾರ್ಮಿಕ ಸ್ಥಳಗಳು, ತಂತ್ರಜ್ಞಾನ ಕೇಂದ್ರಗಳು ಸಹಕಾರಿ ಸಂಘಗಳು ಇತ್ಯಾದಿಗಳ ಭೇಟಿಯನ್ನು ಒಳಗೊಂಡಿದೆ. ತರಗತಿಯಲ್ಲಿ ಕಲಿತ ವಿಷಯಗಳನ್ನು ಕ್ಷೇತ್ರ ಹಂತದಲ್ಲಿ ತಾಳೆ ನೋಡುವ ಮತ್ತು ಪರಿಕಲ್ಪನೆಗಳನ್ನು ವಿವಿಧ ಮಗ್ಗುಲಗಳಿಂದ ತಿಳಿಯಲು ಸಾಧ್ಯವಾಗುತ್ತದೆ.

**ಶಾಲಾ ಭೇಟಿಯ ಸಮಯದಲ್ಲಿ ಮಕ್ಕಳು ತಮ್ಮ ಕ್ಷೇತ್ರ ಭೇಟಿಯ ಅನುಭವಗಳನ್ನು ನಿಮ್ಮ ಜೊತೆಗೆ ಹಂಚಿಕೊಂಡಿದ್ದಾರೆಯೇ ? ಹಾಗಾದರೆ ಕ್ಷೇತ್ರ ಅಧ್ಯಯನಕ್ಕೆ ಅವಕಾಶವಿರುವ ವಿಷಯಗಳನ್ನು (ಘಟಕಗಳನ್ನು) ಪಟ್ಟಿ ಮಾಡಿ.**

ಸಮೀಕ್ಷೆಯುತ ಕ್ಷೇತ್ರ ಅಧ್ಯಯನವನ್ನು ಪರಿಸರದ ವೈವಿಧ್ಯತೆ ವಿಷಯದ ಮೇಲೆ ಕೈಗೊಳ್ಳಬಹುದು. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬರುವ ಪ್ರಾಣಿ, ಸಸ್ಯ, ಭೌಗೋಳಿಕ ಅಂಶಗಳಲ್ಲಿ ಕಾಣುವ ವೈವಿಧ್ಯತೆ ಕುರಿತು ತನ್ನೂರಿನ ಹಬ್ಬ ಹರಿದಿನಗಳು ಆಚರಿಸುವ ಕ್ರಮ, ಹೆಸರಾಂತ ವ್ಯಕ್ತಿಗಳು ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆ ಕ್ಷೇತ್ರ ಅಧ್ಯಯನ ನಡೆಸಿ ವೈವಿಧ್ಯತೆಯ ಬಗ್ಗೆ ತಿಳಿಯಬಹುದು. ಎಂದು ಶಿಕ್ಷಕರು ಯೋಚಿಸಹುದಲ್ಲವೇ?

## 2.6 ವಿನ್ಯಾಸ ಆಧಾರಿತ ಕಲಿಕೆ. (Design Thinking Learning)

ವಿನ್ಯಾಸ ಆಧಾರಿತ ಕಲಿಕೆಯು ಒಂದು ಬೋಧನಾ ವಿಧಾನವಾಗಿದ್ದು, ವಿನ್ಯಾಸಗಳ ಮೂಲಕ ಕಲಿಕೆಗೆ ಒತ್ತು ನೀಡುವಂತಹದ್ದಾಗಿದೆ. ಇದು ಭೌತಿಕ ವಸ್ತು ಅಥವಾ ಡಿಜಿಟಲ್ ಕಲಾಕೃತಿಗಳನ್ನು ಒಳಗೊಂಡಿರುತ್ತದೆ. ಒಂದು ಸಮಸ್ಯೆಗೆ ರಚನೆ, ನಿರ್ಮಾಣ ಅಥವಾ ವಿನ್ಯಾಸಗೊಳಿಸುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿ ಪರಿಹಾರವನ್ನು ನೀಡುತ್ತದೆ.

ಇದು ವಿದ್ಯಾರ್ಥಿಗಳಲ್ಲಿ ಚಿಂತನೆ, ಸೃಜನಶೀಲತೆ, ಸಮಸ್ಯಾ ಪರಿಹಾರ ಕೌಶಲ್ಯವನ್ನು ಪ್ರೋತ್ಸಾಹಿಸುತ್ತದೆ. ಇದು ವಿಜ್ಞಾನ, ಕಲೆ, ತಂತ್ರಜ್ಞಾನಗಳಂತಹ ವಿವಿಧ ವಿಷಯಗಳ ಅನುಭವವನ್ನು ಒದಗಿಸಿಕೊಡುತ್ತದೆ.

**ಉದ್ದೇಶಗಳು:-**

1. ವಿದ್ಯಾರ್ಥಿಗಳ ಚಿಂತನಾ ಕೌಶಲ್ಯವನ್ನು ಅಭಿವೃದ್ಧಿಪಡಿಸುತ್ತದೆ.
2. ಸೃಜನಶೀಲತೆಯನ್ನು ಉತ್ತೇಜಿಸುತ್ತದೆ..
3. ಸಮಸ್ಯೆ ಪರಿಹರಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
4. ವಾಸ್ತವ ಜಗತ್ತಿನ ಸನ್ನಿವೇಶಗಳಿಗೆ ಕಲಿಕೆಯನ್ನು ಅನ್ವಯಿಸುತ್ತದೆ.

ಒಟ್ಟಿನಲ್ಲಿ ಈ ವಿಧಾನದ ಮುಖ್ಯ ಉದ್ದೇಶವು ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಲು ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಹಾಗೂ ಅನ್ವಯಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತದೆ.

**ಕಲಿಕಾ ಪರಿಣಾಮಗಳು:-**

1. ವಿದ್ಯಾರ್ಥಿ ತನ್ನದೇ ವೇಗದಲ್ಲಿ ಕಲಿಯುವ ಅವಕಾಶ.
2. ಶಿಸ್ತಿನ ಕಲಿಕೆಯನ್ನು ಉತ್ತೇಜಿಸುತ್ತದೆ.
3. ಸಹಕಾರ ಮನೋಭಾವನೆ ಬೆಳೆಸುತ್ತದೆ.
4. ವಿದ್ಯಾರ್ಥಿ ತನ್ನದೇ ನಿರ್ದಿಷ್ಟ ಜವಾಬ್ದಾರಿಯಲ್ಲಿ ಕಾರ್ಯ ನಿರ್ವಹಿಸುತ್ತಾನೆ.
5. ವಿದ್ಯಾರ್ಥಿಗಳಿಗೆ ಸಾಮಾಜಿಕ ಸಾಮರ್ಥ್ಯಗಳು ಅಭಿವೃದ್ಧಿಯಾಗುತ್ತವೆ.
6. ಮಾಹಿತಿ ಹಂಚಿಕೊಳ್ಳುವುದರಿಂದ ಜ್ಞಾನದ ಕ್ಷಿತಿಜ ವಿಸ್ತರಿಸುತ್ತದೆ.

**ನಿಮಗೆ ನೆನಪಿದೆಯೇ?**

ನೀವು ಶಾಲೆಯಲ್ಲಿದ್ದಾಗ , "ನನ್ನ ಮೆಚ್ಚಿನ ಹವ್ಯಾಸಗಳು" ಎಂಬ ವಿಷಯದ ಮೇಲೆ ಪ್ರಬಂಧವನ್ನು ಬರೆದದ್ದು. …….

ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜ್ಞಾನದ ಚಿತ್ರಗಳನ್ನು, ಭಾರತ ದೇಶದ ನಕ್ಷೆಯನ್ನು ಬಿಡಿಸಿ ಬಣ್ಣ ತುಂಬಿದ್ದು. ……..

ಸ್ವತಂತ್ರದಿನೋತ್ಸವದಂದು ದೇಶಭಕ್ತಿಗೀತೆ ಹಾಡಿದ್ದು……..

ಸ್ವತಂತ್ರ ಹೋರಾಟಗಾರರ ಕುರಿತು ಪ್ರಬಂಧ ಬರೆದದ್ದು………

ಚಿತ್ರಕಲಾ ಶಿಕ್ಷಕರು ವ್ಯಕ್ತಿಚಿತ್ರಣ ಬಿಡಿಸಲು ಹೇಳಿದ್ದು……..

ಶಾಲಾ ವಾರ್ಷಿಕೋತ್ಸವದಲ್ಲಿ ನಾಟಕವಾಡಿದ್ದು. ……

ಸತ್ಯ ಹರಿಶ್ಚಂದ್ರ ಮತ್ತು ಶ್ರವಣಕುಮಾರ ಚಲನಚಿತ್ರಗಳನ್ನು ಬಾರಿ ಬಾರಿ ನೋಡಿದ್ದು ……...

ಪುಣ್ಯಕೋಟಿ ಹಸುವಿನ ಹಾಡಿಗೆ ಧೋ ಎಂತಾ ಕಣ್ಣೀರು ಸುರಿಸಿದ್ದು……..




## 2.8 ಕಲಾ ಅಂತರ್ಗತ ಕಲಿಕೆ . (Art Integrated Learning) (ಕಲಾ ಸಮ್ಮಿಳಿತ ಕಲಿಕೆ)

**ಕಲೆ" ಎಂಬ ಪದವನ್ನು ನೀವು ಕೇಳಿದಾಗ ನಿಮ್ಮ ಮನಸ್ಸಿಗೆ ಏನು ಬರುತ್ತದೆ?**

ಗುಪ್ತ ಪ್ರತಿಭೆಯನ್ನು ತೋರಿಸುತ್ತಿದೆಯೇ? ಅಥವಾ ನಿಮ್ಮ ಮೆಚ್ಚಿನ ಚಟುವಟಿಕೆಯನ್ನು ಅನನ್ಯ ರೀತಿಯಲ್ಲಿ ಮಾಡುವುದೇ?

ಈ ಮೇಲಿನ ಸನ್ನಿವೇಶಗಳನ್ನು ನಾವು ಒಮ್ಮೆ ಮೆಲಕುಹಾಕಿದಾಗ ನಮಗೆ ಶಿಕ್ಷಣದಲ್ಲಿ ಕಲೆಯು ಭಾವನಾತ್ಮಕ ಬುದ್ಧಿವಂತಿಕೆ, ಉತ್ತಮ ತಿಳುವಳಿಕೆ, ಆತ್ಮ ವಿಶ್ವಾಸ ಮತ್ತು ಸಹಾನುಭೂತಿ ಅನುಭೂತಿಯಂತಹ ಸಾಮರ್ಥ್ಯಗಳನ್ನು ಪಡೆಯಲು ವಿದ್ಯಾರ್ಥಿಗಳನ್ನು ಸಕ್ರಿಯಗೊಳಿಸುವಲ್ಲಿ ಒಂದು ಪ್ರಭಾವಿ ಮಾಧ್ಯಮವಾಗಿದೆ ಎಂದೆನಿಸುವುದಲ್ಲವೇ? ಕಲೆಯ ಮೌಲ್ಯವು ಕಲ್ಪನೆಯ ಪೋಷಣೆಯಿಂದ ವಿಶ್ಲೇಷಣೆಯನ್ನು ಬೆಳೆಸುವವರೆಗೂ ವ್ಯಾಪಕವಾಗಿ ವಿಸ್ತರಿಸುತ್ತದೆ.

**ಕಲೆ ಜನ್ಮಜಾತ ಪ್ರವೃತ್ತಿಯಾಗಿದೆ.**

ಪ್ರತಿಯೊಬ್ಬರೂ ಒಂದಿಲ್ಲಾ ಒಂದು ರೀತಿಯಲ್ಲಿ ಕಲಾತ್ಮಕ ಇಚ್ಛೆಯನ್ನು ಹೊಂದಿರುತ್ತಾರೆ, ಮತ್ತು ಕಲೆಯನ್ನು ಆಸ್ವಾದಿಸುವ ಮತ್ತು ಪ್ರಸ್ತುತಪಡಿಸುವ ಉತ್ಸಾಹವುಳ್ಳರಾಗಿರುತ್ತಾರೆ. ಕೆಲವು ವಿದ್ಯಾರ್ಥಿಗಳು, ಉತ್ತಮ ಭಾಷಣವನ್ನು ಮಾಡುವುದನ್ನು ಆನಂದಿಸುತ್ತಾರೆ. ಕೆಲವು ವಿದ್ಯಾರ್ಥಿಗಳು ಸುಂದರವಾದ ಚಿತ್ರಗಳನ್ನು ಬಿಡಿಸುವಲ್ಲಿ ಉತ್ಸಾಹವುಳ್ಳರಾಗಿರುತ್ತಾರೆ. ಕೆಲವರು ಚೆನ್ನಾಗಿ ಹಾಡುವುದು ಮತ್ತು ನೃತ್ಯ ಮಾಡುವುದನ್ನು ಆನಂದಿಸುತ್ತಾರೆ. ಹೀಗೆ ವಿವಿಧ ರೀತಿಯ ಕಲೆಗಳನ್ನು ಹೊಂದಿರುವ ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆಗಳನ್ನು ವೀಕ್ಷಿಸಿದಾಗ ಅವರು ಬೇರೆ ವಿದ್ಯಾರ್ಥಿಗಳಿಗಿಂತ ಕ್ರಿಯಾಶೀಲರಾಗಿ ಕಾಣಿಸುತ್ತಾರೆ.

ಈ ಕುರಿತಾಗಿ ಹಲವಾರು ಅಧ್ಯಯನಗಳು ದೃಡೀಕರಿಸಿದ್ದುಂಟು. ಸಂಶೋಧನೆಯ ಪ್ರಕಾರ, ಸೃಜನಶೀಲ ಮತ್ತು ಸಾಂಸ್ಕೃತಿಕ ಅನ್ವೇಷಣೆಗಳಲ್ಲಿ ತೊಡಗಿರುವ ಮಕ್ಕಳು ಹೆಚ್ಚಿನ IQ ಗಳನ್ನು ಹೊಂದಿರುತ್ತಾರೆ. ಉದಾಹರಣೆಗೆ, ವಾದ್ಯವನ್ನು ಕಲಿಯುವುದು ವರ್ಧಿತ ಸ್ಮರಣೆ ಮತ್ತು ಗಮನಕ್ಕೆ ಸಂಬಂಧಿಸಿದೆ, ಹಾಗೆ ನೃತ್ಯವು ಸಮನ್ವಯ ಮತ್ತು ಪ್ರಾದೇಶಿಕ ಅರಿವನ್ನು ಹೆಚ್ಚಿಸಲು ಸಹಾಯಕವಾಗಿದೆ.

ಆರ್ಟ್ ಇಂಟೆಗ್ರೇಟೆಡ್ ಲರ್ನಿಂಗ್ (AIL) ಒಂದು ಬೋಧನಾ-ಕಲಿಕೆ ಮಾದರಿಯಾಗಿದ್ದು, ಇದು 'ಕಲೆಗಳ ಮೂಲಕ' ಮತ್ತು 'ಕಲೆಗಳೊಂದಿಗೆ' ಕಲಿಕೆಯ ಮೇಲೆ ಆಧಾರಿತವಾಗಿದೆ: ಇದು ಕಲೆಯು ಬೋಧನೆ-ಕಲಿಕೆಯ ಮಾಧ್ಯಮವಾಗುವಂತಹ ಪ್ರಕ್ರಿಯೆಯಾಗಿದೆ, ಯಾವುದೇ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಇದು ಒಂದು ಕೀಲಿಯಾಗಿದೆ.

ಕಲಾ ಸಮ್ಮಿಳಿತ ಕಲಿಕೆಗೆ ಯಾವೆಲ್ಲ ಕಲೆಗಳನ್ನು ಪ್ರಯೋಗಿಸಬಹುದು?

ವಿವಿಧ ಕಲಾ ಪ್ರಕಾರಗಳ ಮೂಲಕ ವಿಭಿನ್ನ ಪರಿಕಲ್ಪನೆಗಳ ನಡುವೆ ಸಂಪರ್ಕವನ್ನು ನಿರ್ಮಿಸುವಾಗ ಕಲಿಯುವವರು ಸೃಜನಾತ್ಮಕವಾಗಿ ಅನ್ವೇಷಿಸುತ್ತಾರೆ. ದೃಶ್ಯ (ರೇಖಾಚಿತ್ರ ಮತ್ತು ಚಿತ್ರಕಲೆ, ಮಣ್ಣಿನ ಮಾಡೆಲಿಂಗ್, ಕುಂಬಾರಿಕೆ, ಕಾಗದದ ಕರಕುಶಲ, ಮುಖವಾಡ ಮತ್ತು ಬೊಂಬೆ ತಯಾರಿಕೆ, ಪರಂಪರೆಯ ಕರಕುಶಲ ಇತ್ಯಾದಿ) ಮತ್ತು ಪ್ರದರ್ಶನ ಕಲೆಗಳಲ್ಲಿ (ಸಂಗೀತ, ನೃತ್ಯ, ರಂಗಭೂಮಿ, ಬೊಂಬೆಯಾಟ ಇತ್ಯಾದಿ) ಕಲಾ ಅನುಭವಗಳು, ಉತ್ತಮ ತಿಳುವಳಿಕೆ ಮತ್ತು ನಿರ್ಮಾಣಕ್ಕೆ ಕಾರಣವಾಗುತ್ತವೆ. ಇದು ಪ್ರಾಯೋಗಿಕ ಕಲಿಕೆಯ ವಿಧಾನದೊಂದಿಗೆ ಸಂಯೋಜಿತವಾಗಿದೆ.




**ಶಿಕ್ಷಣದಲ್ಲಿ ಕಲಾ ಅಂತರ್ಗತ ಕಲಿಕೆಯು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ, ಸ್ಮಾರ್ಟ್ ಕಲಿಕೆ, ಸೃಜನಶೀಲತೆ ಮತ್ತು ತಾರ್ಕಿಕ ಚಿಂತನೆಯನ್ನು ಉತ್ತೇಜಿಸಲು ಸಹಕಾರಿಯಾಗಿವೆ. ನಾವು ಶಾಲಾದಿನಗಳಲ್ಲಿ ರೂಢಿಸಿಕೊಂಡ ವಿವಿಧ ಕಲೆಯ ಚಟುವಟಿಕೆಗಳು ನಮ್ಮ ಇಂದಿನ ಬದುಕಿನಲ್ಲಿ ಜೀವನ ಕೌಶಲಗಳನ್ನು ಹೊಂದಲು ಪ್ರೇರಣೆಯನ್ನು ನೀಡಿವೆ ಎಂದು ನಮಗೆ ಭಾಸವಾಗುತ್ತದೆ. ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಕಲೆಯ ಮೂಲಕ ಕಲಿಕೆಯು ಸಂಯೋಜಿತಗೊಂಡಿದೆ.**



ಎಲ್ಲಾ ಮಕ್ಕಳು ತಮ್ಮ ಕಲ್ಪನೆ ಮತ್ತು ಭಾವನಾತ್ಮಕ ಸಾಮರ್ಥ್ಯಗಳೊಂದಿಗೆ ಪ್ರತಿಕ್ರಿಯಿಸುವಂತೆ ಮಾಡುತ್ತದೆ. ಮಕ್ಕಳ ಅಗತ್ಯಗಳು ವಯಸ್ಸು, ಸಾಮಾಜಿಕ ಸಂದರ್ಭಗಳು ಮತ್ತು ಸಾಮರ್ಥ್ಯದೊಂದಿಗೆ ಬದಲಾಗುತ್ತವೆ. ಕಲೆಯ ಸಮಗ್ರ ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲು ಆಯಾ ಶಿಕ್ಷಣದ ಹಂತಗಳಲ್ಲಿ ಒಳಗೊಳ್ಳತ್ತದೆ.

## ಕಲಾ ಸಮ್ಮಿಳಿತ ಕಲಿಕೆ (AIL ) ಚಟುವಟಿಕೆಗಳ ಯೋಜನೆ

**ಪೂರ್ವ ಪ್ರಾಥಮಿಕ:**

NCF 2005 ಶಿಫಾರಸು ಮಾಡಿದಂತೆ, ಈ ಹಂತದಲ್ಲಿ ಎಲ್ಲಾ ಶಿಕ್ಷಣವು ಕಲೆಗಳ ಮೂಲಕ ಇರಬೇಕು: ಚಿತ್ರಕಲೆ, ಕ್ಲೇ ಮಾಡೆಲಿಂಗ್, ಹಾಡುಗಾರಿಕೆ, ಕ್ರಿಯೆಗಳು ಅಥವಾ ಚಲನೆಗಳು. 90% ಪಠ್ಯಕ್ರಮವು ಕಲಾ ಆಧಾರಿತವಾಗಿರಬೇಕು ಎಂದು ಅದು ಒತ್ತಿಹೇಳುತ್ತದೆ. ಆದ್ದರಿಂದ, ಈ ಹಂತದ ಚಟುವಟಿಕೆಗಳನ್ನು ಯೋಜಿಸುವಾಗ, ಶಿಕ್ಷಕರು ಮೇಲಿನ ಮಾನದಂಡಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

**ಪ್ರಾಥಮಿಕ:**

ಪ್ರಾಥಮಿಕ ಹಂತದಲ್ಲಿ, ಕಲೆಗಳನ್ನು ಎಲ್ಲಾ ವಿಷಯಗಳೊಂದಿಗೆ ಸಂಯೋಜಿಸಬೇಕು ಮತ್ತು ವಿಭಿನ್ನ ಪರಿಕಲ್ಪನೆಗಳ ಬೋಧನೆ ಮತ್ತು ಕಲಿಕೆಯ ವಿಧಾನವಾಗಿ ಬಳಸಬೇಕು. ಇದು ಮಕ್ಕಳು ತಮ್ಮ ಆಲೋಚನೆಗಳು ಮತ್ತು ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯ ಮಾಡುತ್ತದೆ. ಅವರು ತೀಕ್ಷ್ಣವಾದ ವೀಕ್ಷಣೆ, ಕುತೂಹಲಕಾರಿ ಪರಿಶೋಧನೆ ಮತ್ತು ಸ್ವಯಂಪ್ರೇರಿತ ಅಭಿವ್ಯಕ್ತಿಯ ಮೂಲಕ ಎಲ್ಲಾ ಇಂದ್ರಿಯಗಳನ್ನು ಅಭಿವೃದ್ಧಿಪಡಿಸುತ್ತಾರೆ. ನಮ್ಮ

ಬಹುತೇಕ ಪ್ರಾಥಮಿಕ ಶಾಲೆಗಳಲ್ಲಿನ ವ್ಯವಸ್ಥೆಯಂತೆ, ಒಬ್ಬ ಶಿಕ್ಷಕಿ ತನ್ನ ತರಗತಿಗೆ ಎಲ್ಲಾ ವಿಷಯಗಳನ್ನು ಕಲಿಸುತ್ತಾರೆ, ಇದು ಬಹುವಿಧದ ಕಲಿಕೆಗೆ ಅನುಕೂಲವಾಗುವ ರೀತಿಯಲ್ಲಿ ಕಲಾ ಅನುಭವಗಳನ್ನು ಯೋಜಿಸುವ ಸ್ವಾತಂತ್ರ್ಯ ಮತ್ತು ವ್ಯಾಪ್ತಿಯನ್ನು ನೀಡುತ್ತದೆ.

**ಹಿರಿಯ ಪ್ರಾಥಮಿಕ:**

ಪ್ರಾಥಮಿಕ ಹಂತದಲ್ಲಿ, ಕಲಿಯುವವರ ಸ್ವಂತ ಕಲ್ಪನೆಯ ಬಳಕೆ ಮತ್ತು ಅವರ ಸೃಜನಶೀಲ ಅಭಿವ್ಯಕ್ತಿಗಳ ಅಭಿವೃದ್ಧಿಗೆ ಒತ್ತು ನೀಡಬೇಕು. ಈ ಹಂತದ ಮಕ್ಕಳು ತಮ್ಮ ಸಾಮಾಜಿಕ-ಭಾವನಾತ್ಮಕ ಅಭಿವೃದ್ಧಿ ಮತ್ತು ಜೀವನ ಕೌಶಲ್ಯಗಳ ವರ್ಧನೆಗಾಗಿ ತಂಡಗಳಲ್ಲಿ ಒಟ್ಟಾಗಿ ಕೆಲಸ ಮಾಡಲು ಸೂಚಿಸಲಾಗಿದೆ (ಅಂತರ-ವೈಯಕ್ತಿಕ ಸಂವಹನ, ಸಹಯೋಗ ಮತ್ತು ಸಹಕಾರ, ವೈವಿಧ್ಯತೆಗೆ ಗೌರವ ಮತ್ತು ಪರಸ್ಪರರ ದೃಷ್ಟಿಕೋನಕ್ಕೆ ಮೆಚ್ಚುಗೆ, ನಾಯಕತ್ವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು, ಸಮಸ್ಯೆ ಪರಿಹರಿಸುವ ಸಾಮರ್ಥ್ಯಗಳು. ಇತ್ಯಾದಿ) ಈ ವಯಸ್ಸಿನ ಗುಂಪು ಹದಿಹರೆಯದ ಆರಂಭವಾದ್ದರಿಂದ, ಅವರ ಬೆಳೆಯುತ್ತಿರುವ ಕಾಳಜಿಗಳನ್ನು ಕಲೆಗಳ ಏಕೀಕರಣದ ಮೂಲಕ ಸ್ವಾಭಾವಿಕವಾಗಿ ಮತ್ತು ಪರಿಣಾಮಕಾರಿಯಾಗಿ ಮಕ್ಕಳ ಆವರ್ತಕ ಮರು-ಗುಂಪು ಮಾಡುವಿಕೆಯು ಉತ್ತಮ ವಿಚಾರಗಳ ವಿನಿಮಯಕ್ಕಾಗಿ ಮತ್ತು ವಿವಿಧ ಕಲಿಕೆಯ ಹಂತಗಳಿಗೆ ಅವಕಾಶ ಕಲ್ಪಿಸುತ್ತದೆ. ಏಕತಾನತೆಯನ್ನು ತಪ್ಪಿಸಲು ಮಕ್ಕಳಿಗೆ ವೈವಿಧ್ಯಮಯ ಕಲಾ ಪ್ರಕಾರಗಳು ಮತ್ತು ವಸ್ತುಗಳನ್ನು ಬಳಸಲು ಅನುಮತಿಸಲಾಗಿದೆ.




ಪರಿಶೋಧನಾತ್ಮಕ ಸಾಧನವಾಗಿ ICT ಅನ್ನು ಪ್ರೋತ್ಸಾಹಿಸಲಾಗುತ್ತದೆ.

ಸ್ಥಳೀಯ/ಪ್ರಾದೇಶಿಕ ಕುಶಲಕರ್ಮಿಗಳೊಂದಿಗೆ ಸಂವಾದಿಸಲು ಮಕ್ಕಳಿಗೆ ಅವಕಾಶಗಳನ್ನು ಒದಗಿಸಲಾಗುತ್ತದೆ ಮತ್ತು ಸ್ಥಳೀಯ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಅವರ ಸಂವೇದನೆ ಮತ್ತು ಜಾಗೃತಿಯನ್ನು ಹೆಚ್ಚಿಸುತ್ತದೆ.

### ಕಲಾ ಸಮ್ಮಿಳಿತ ಕಲಿಕೆಯಿಂದಾಗುವ ಪ್ರಯೋಜನಗಳು


ಒಬ್ಬ ಮೇಲ್ವಿಚಾರಕರಾಗಿ ನೀವು ಯಾವ ವಿಷಯ ಶಿಕ್ಷಕರು ತರಗತಿಯಲ್ಲಿ ಯಾವ ಯಾವ ಕಲಾ ವಿಧಗಳ ಮೂಲಕ ಮಕ್ಕಳ ಕಲಿಕಾ ಚಟುವಟಿಕೆಗಳನ್ನು ಅಯೋಜಿಸಿದ್ದರ ಕುರಿತು ಗಮನಿಸಿದ್ದೀರಾ ? (ಒಂದಿಷ್ಟು ಉದಾಹರಿಸಬಹುದಾ….?)

ಕಲಾ ಸಮ್ಮಿಳಿತ ಕಲಿಕೆಯು ವಿದ್ಯಾರ್ಥಿಗಳ ವರ್ತನೆಗಳು ಮತ್ತು ಜೀವನ ಕೌಶಲಗಳ ಬೆಳವಣಿಗೆಯಲ್ಲಿ ಹೇಗೆ ಸಹಾಯಕವಾಗಿದೆ ಎಂದು ಅಧ್ಯಯನಗಳಿಂದ ದೃಡೀಕರಣವಾಗಿದೆ. ಈ ಎಲ್ಲ ಅಧ್ಯಯನಗಳ ಅಂಶಗಳು ಹೀಗೆ ವ್ಯಕ್ತವಾಗಿವೆ.

ಕಲೆಯು ಶಿಕ್ಷಣದಲ್ಲಿ ಪ್ರಮುಖ ಮತ್ತು ಬಹುಮುಖಿ ಪಾತ್ರವನ್ನು ವಹಿಸುತ್ತದೆ,. ತರಗತಿ ಪರಿಸರದಲ್ಲಿ ವಿವಿಧ ವಿಷಯಗಳ ಕ್ಲಿಷ್ಟಕರ ಪರಿಕಲ್ಪನೆಗಳನ್ನು ಸರಳವಾಗಿ ಅರ್ಥೈಸಲು ಕಲೆಯನ್ನು ಸಮ್ಮಿಳಿತಗೊಳಿಸಲಾಗುವುದು. ಇದು ಕಲಿಕೆಯ ಅನುಭವವನ್ನು ಉತ್ಕೃಷ್ಟಗೊಳಿಸುತ್ತದೆ ಮತ್ತು ವೈಯಕ್ತಿಕ ಯಶಸ್ಸು, ಸಾಮಾಜಿಕ ಕೊಡುಗೆಗೆ ಅಗತ್ಯವಾದ ಕೌಶಲ ಹಾಗೂ ದೃಷ್ಟಿಕೋನಗಳೊಂದಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತದೆ.

- ಅರಿವಿನ ಅಭಿವೃದ್ಧಿ:
- ವಿಮರ್ಶಾತ್ಮಕ ಚಿಂತನೆಯ ಅಭಿವೃದ್ಧಿ:
- ವಿವಿಧ ವಿಷಯಗಳ ಪರಿಕಲ್ಪನೆ:
- ಭಾವನಾತ್ಮಕ ಬುದ್ಧಿವಂತಿಕೆ:
- ಸಾಂಸ್ಕೃತಿಕ ಅರಿವು ಮತ್ತು ಸಹಾನುಭೂತಿ:
- ಸಂವಹನ ಕೌಶಲ್ಯಗಳು:
- ಪ್ರಚೋದಿತ ಕಲ್ಪನೆ:
- ಉತ್ತಮ ಮೋಟಾರು ಕೌಶಲ್ಯಗಳು:

- .ಶೈಕ್ಷಣಿಕ ಸಾಧನೆ:
- ವೈಯಕ್ತಿಕ ಗೌರವ ಮತ್ತು ಸ್ವಾಭಿಮಾನ :
- ಅಂತರಶಿಸ್ತೀಯ ಕಲಿಕೆ:
- ಸಮುದಾಯ ತೊಡಗಿಸಿಕೊಳ್ಳುವಿಕೆ
- ಸಾಂಸ್ಕೃತಿಕ ಸಂರಕ್ಷಣೆ
- ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವುದು
- ಒತ್ತಡ ನಿವಾರಣೆ ಮತ್ತು ಮಾನಸಿಕ ಯೋಗಕ್ಷೇಮ
- ವೃತ್ತಿ ಅವಕಾಶಗಳು




**ಪೂರಕ ಜ್ಞಾನ ನೀಡುವ ಪಠ್ಯಾಧಾರಿತ ನಾಟಕಗಳು:**

ಇಂದು ಪ್ರಾಥಮಿಕ ಶಿಕ್ಷಣದ ಮಕ್ಕಳ ಕಲಿಕೆಯಲ್ಲಿ ಏನೆಲ್ಲಾ ಪ್ರಯೋಗಗಳು ನಿರಂತರವಾಗಿ ನಡೆಯುತ್ತಲೇ ಇವೆ. ಹತ್ತು ಹದಿನೈದು ವರ್ಷಗಳ ಹಿಂದಕ್ಕೆ ನಿಂತು ನೋಡಿದಾಗ ಪ್ರಾಥಮಿಕ ಶಿಕ್ಷಣದ ಕಲಿಕೆಯಲ್ಲಿ ಏಕತಾನತೆ ಇತ್ತು. ಕಲಿಸುವ ಕ್ರಿಯೆಯಲ್ಲಿ ತಲೆ ತಲಾಂತರದಿಂದ ಬಂದ ಕಂಠಪಾಠ ಪದ್ಧತಿಯೇ ಹೆಚ್ಚು ಮುಂದುವರೆದುಕೊಂಡು ಬಂದಿತ್ತು. ಕಾಲಕ್ರಮೇಣ ಸುಧಾರಣೆಯ ಗಾಳಿ ಬೀಸಿ ಹತ್ತಾರು ಆಯೋಗಗಳು ನೂರಾರು

ಸಲಹೆಗಳನ್ನು ನೀಡಿದವು. ಅವುಗಳ ಪ್ರಯೋಗ ನಡೆಯುತ್ತಾ ಸಾಗಿತು. ಅದರಲ್ಲಿ ತುಂಬಾ ಪ್ರಮುಖವಾದದ್ದು ಮತ್ತು ಪರಿಣಾಮಕಾರಿಯಾದದ್ದು ಪಠ್ಯಾಧಾರಿತ ನಾಟಕಗಳು.

ಪಠ್ಯಪುಸ್ತಕವೇ ಸರ್ವಸ್ವ ಎಂದುಕೊಂಡು ಕೇವಲ ನಾಲ್ಕು ಗೋಡೆಗಳ ಮಧ್ಯ ಪಾಠ ಮಾಡುವುದು ಮಕ್ಕಳ ಬೆಳವಣಿಗೆಗೆ ಸಹಕಾರಿಯಲ್ಲ. ಕೇವಲ ಮಾಹಿತಿ ನೀಡುವ ಪ್ರಕ್ರಿಯೆ ಪರಿಪೂರ್ಣ ಶಿಕ್ಷಣ ಎನಿಸಿಕೊಳ್ಳದು. ಮುಂದೆ ಸಮಾಜದಲ್ಲಿ ಕ್ರಿಯಾಶೀಲ ನಾಗರಿಕರಾಗಿ ಬಾಳಬೇಕಾದ ಮಕ್ಕಳು ಚಿಕ್ಕವರಿರುವಾಗಲೇ ಸುತ್ತಲಿನ ಪರಿಸರ, ಸಮಾಜದ ಕುರಿತಾಗಿ ತಮ್ಮಲ್ಲಿಯೇ ಆಲೋಚನೆ ಮಾಡಿ ಸರಿ ದಾರಿಯಲ್ಲಿ ನಡೆಯುವಂತೆ ಮಾಡುವ ಸಾಹಿತ್ಯ ರಚನೆ ಇದೀಗ ಅಗತ್ಯವಾಗಿದೆ. ಇದಕ್ಕೆ ಪೂರಕವಾಗಿದ್ದು ಪಠ್ಯಾಧಾರಿತ ನಾಟಕಗಳು.

ಮಕ್ಕಳ ಕಲಿಕೆಯ ಕ್ರಿಯೆಯಲ್ಲಿ ಅತ್ಯಂತ ಹೆಚ್ಚು ಪರಿಣಾಮ ಬೀರುವಂಥದ್ದು ಅಭಿನಯದ ಮೂಲಕ ತಿಳಿಸುವ ಕ್ರಿಯೆ. ಇದು ಮಕ್ಕಳಿಂದ ಮಕ್ಕಳಿಗೆ ಹೇಳಿಸುವ ಕಲೆ. ಪಾಠದಲ್ಲಿ ಬರುವ ಪಾತ್ರಗಳಿಗೆ ಸಂಭಾಷಣೆ ಸಿದ್ಧಪಡಿಸಿ ಮಕ್ಕಳಿಂದ ರಂಗದ ಮೇಲೆ ಅಭಿನಯಿಸುವಂತೆ ಮಾಡಿದಾಗ, ಮಕ್ಕಳು ಪಾತ್ರಗಳಿಗೆ ಜೀವ ತುಂಬಿ ಸ್ವಚ್ಛಂದವಾಗಿ ನಲಿದಾಡುತ್ತಾರೆ. ಇದರಿಂದ ಕಲಿಕೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ವಿಷಯ ಯಾವುದೇ ಇರಲಿ. ವಿಜ್ಞಾನ, ಸಮಾಜ, ಗಣಿತದ ಯಾವುದೇ ಅಮೂರ್ತ ಕಲ್ಪನೆಗಳನ್ನು ಮೂರ್ತೀಕರಿಸಿ ಮಕ್ಕಳಿಗೆ ಸುಲಭವಾಗಿ ತಿಳಿಸುವಂತೆ ಮಾಡುವಲ್ಲಿ ಪಠ್ಯಾಧಾರಿತ ನಾಟಕಗಳು ಖಂಡಿತಾ ಯಶಸ್ವಿಯಾಗುತ್ತವೆ. ಪಠ್ಯಾಧಾರಿತ ನಾಟಕಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಧಾರವಾಡದ ಜಿಲ್ಲಾ ತರಬೇತಿ ಮತ್ತು ಶಿಕ್ಷಣ ಸಂಸ್ಥೆ(ಡೈಟ್) ಕಳೆದ ೧೦ ವರ್ಷಗಳಿಂದ ಶಿಕ್ಷಕರನ್ನು ಪ್ರೋತ್ಸಾಹಿಸುತ್ತಾ ಬಂದಿದ್ದು, ಪಠ್ಯಾಧಾರಿತ ನಾಟಕಗಳ ಸ್ಪರ್ಧೆ, ಶಿಕ್ಷಕರಿಗೆ ನಾಟಕ ರಚನೆ ಕಾರ್ಯಾಗಾರ, ನಾಟಕಗಳಿಗೆ ಪ್ರೋತ್ಸಾಹ ಧನ ನೀಡುತ್ತಾ ಬಂದಿದೆ. ಇತ್ತೀಚೆಗೆ ಹುಬ್ಬಳ್ಳಿ ಕನ್ನಡ ಸಾಹಿತ್ಯ ಪರಿಷತ್ತು ಪಠ್ಯಾಧಾರಿತ ನಾಟಕಗಳ ಮೇಲೆ ಬೆಳಕು ಚೆಲ್ಲಿ, ಪಠ್ಯಾಧಾರಿತ ನಾಟಕಗಳ ವಿಮರ್ಶೆಯನ್ನು ಹಮ್ಮಿಕೊಂಡಿದ್ದು ಸ್ಮರಿಸಬಹುದಾಗಿದೆ.

ಒಟ್ಟಿನಲ್ಲಿ ಕೇವಲ ಶುಷ್ಕವಾದ ಮಾಹಿತಿ ನೀಡುವುದು ಶಿಕ್ಷಣ ಎನಿಸದು. ಬೋಧಿಸುವ ವಿಷಯವಸ್ತು ಆಧರಿಸಿ, ಕಾಲ್ಪನಿಕ ಚಿತ್ರಗಳನ್ನು ರೂಪಿಸಿ, ಮಾತುಗಾರಿಕೆ ಹೆಣೆದು, ಪಾತ್ರಗಳನ್ನು ಸೃಷ್ಟಿಸಿ ಮಕ್ಕಳಿಂದ ಮಕ್ಕಳಿಗೆ ಚುರುಕಾಗಿ, ವೇಗವಾಗಿ, ವಿಶಿಷ್ಟವಾಗಿ, ನಿರ್ದಿಷ್ಟವಾಗಿ ಮುಟ್ಟಿಸಲು ಸಾಧ್ಯವಾಗುವ ಶಿಕ್ಷಣ ಅವಶ್ಯ. ಅದು ನಾಟಕಗಳ ಮೂಲಕ ಮಾತ್ರ ಸಾಧ್ಯ. ನಾಟಕಗಳ ಮೂಲಕ ಹಾಡು, ಕೋಲಾಟ, ಹಾವಭಾವ, ವೇಷಭೂಷದ ಮೂಲಕ ನಮ್ಮ ಜನಪದವನ್ನು, ಸಂಸ್ಕೃತಿಯನ್ನು ಬಿಂಬಿಸಲು ಅವಕಾಶವಾಗುತ್ತದೆ.

ಜೀವನವೊಂದು ನಾಟಕ ಕಲೆ. ಅಭಿನಯ ಕಲೆ ಗೊತ್ತಿದ್ದವರು ಜೀವನದ ಪಾತ್ರವನ್ನೂ ಚೆನ್ನಾಗಿ ನಿರ್ವಹಿಸಬಲ್ಲರು. ಎಳೆ ವಯಸ್ಸಿನ ಮಕ್ಕಳಿಗೆ ಸಂತೋಷಕರ ವಾತಾವರಣ ನಿರ್ಮಾಣ ನಾಟಕಗಳಿಂದ ಮಾತ್ರ ಸಾಧ್ಯ.



ಪಾಠದೊಂದಿಗೆ ನಾಟಕದ ಆಟ

ಲಿಂಗರಾಜ ರಾಮಾಪೂರ

## 2.9 ತಂತ್ರಜ್ಞಾನ ಆಧಾರಿತ ಕಲಿಕೆ:

"'ಅ,ಆ,ಇ,ಈ ಕನ್ನಡದ ಅಕ್ಷರಮಾಲೆ, ಅಮ್ಮ ಎಂಬುದು ಕಂದನ ಕರೆಯೋಲೆ' ಹಾಡು ರೆಡಿಯೋದಲ್ಲಿ ಪ್ರಸಾರವಾಗುವಾಗ ನಮ್ಮ ಕಿವಿಗೆ ಇಂಪು ಮನಸ್ಸಿಗೆ ಮುದ ತರುತ್ತಿತ್ತು ಅಲ್ಲವೇ . ಶಾಲಾ ಕಾರ್ಯಕ್ರಮದಲ್ಲಿ ಮೈಕ್ ಮುಂದೆ ನಿಂತು ಜೋರಾಗಿ ರಾಷ್ಟ್ರಗೀತೆ ಹಾಡುವಾಗ ರೋಮಾಂಚನವಾಗುತ್ತಿತ್ತು ಅಲ್ಲವೇ?

ಸರುಳಿ ಟೇಪ್ ರಿಕಾರ್ಡ್ ನಲ್ಲಿ ನಮ್ಮದೇ ಧ್ವನಿಯಲ್ಲಿ ಹಾಡಿದ ಹಾಡು ಕೇಳಿ ಖುಷಿಯಿಂದ ಬಾನಿಗೇರಿದ್ದು ನಮಗೆ ನೆನಪಿದೆಯಲ್ಲವೇ? .........

ಇದು ನಮ್ಮ ಶಾಲಾ ದಿನಗಳ ತಂತ್ರಜ್ಞಾನ ಆಧಾರಿತ ಕಲಿಕೆಯಾಗಿತ್ತು ಅಲ್ಲವೇ?

ಬಳಪ, ಪಾಟಿ ಹಿಡಿಬೇಕಾಗಿದ್ದ ಕೈಗಳೀಗ ಸ್ಕ್ರೀನ್ ಟಚ್ ಮೊಬೈಲ್, ಲ್ಯಾಪ್ ಟಾಪ್ ಮೇಲೆ ಹೊಯ್ದಾಡುತ್ತಿವೆ. ಅಮ್ಮನ ಜೋಗುಳ, ಅಜ್ಜನ ಕಥೆಗಳು, ಗದ್ದೆಗಳಲ್ಲಿ ಸ್ನೇಹಿತರೊಡನೆ ಓಡಾಟವೂ ಮರೆಯಾಗಿವೆ. ಇಂದು ಎಲ್ಲರ ಬಳಿಯೂ ಒಂದಲ್ಲ ಒಂದು ರೀತಿಯ ಇಲೆಕ್ಟ್ರಾನಿಕ್ ಸಾಧನಗಳಿವೆ. ಅಡುಗೆ ಮನೆಯಿಂದ ಹಿಡಿದು ಅಂತರಿಕ್ಷದವರೆಗೂ ಇ-ಸಾಧನಗಳ ಬಳಕೆಯೇ ಬದುಕಾಗಿದೆ. ಹೌದಲ್ಲವೇ?

ಬದಲಾವಣೆ ಜಗದ ನಿಯಮ" ಇಡೀ ವಿಶ್ವವೇ ಇಂದು ಡಿಜಿಟಲ್ ಮಾಧ್ಯಮದತ್ತ ದಾಪುಗಾಲಿಡುತ್ತಿರುವಾಗ ಸಹಜವಾಗಿ ಭಾರತವೂ ಕೂಡ ಒಳ್ಳೆಯದನ್ನು ಹಿಂಬಾಲಿಸಲೇಬೇಕಲ್ಲವೇ?

ಅಲ್ಲದೇ ಮುಂದುವರಿದ ರಾಷ್ಟ್ರಗಳಲ್ಲಿ ಅತೀ ವೇಗವಾಗಿ ಇ-ಶಿಕ್ಷಣಕ್ಕೆ ಒತ್ತು ಕೊಡಲಾಗುತ್ತಿರುವುದು, ಒಂದು ರೀತಿಯಲ್ಲಿ ಅಬಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಒತ್ತಡವೂ ಹೌದು, ಅನಿವಾರ್ಯತೆಯೂ ಕೂಡ. ಹಾಗಿರುವಾಗ ಸಾಂಪ್ರದಾಯಿಕ ಶಿಕ್ಷಣವನ್ನು ಇ-ಶಿಕ್ಷಣದತ್ತ, ತಂತ್ರಜ್ಞಾನ ಆಧರಿತವಾಗಿ ಮಾರ್ಪಾಡು ಮಾಡುವಲ್ಲಿ ಮುಂದಾಗಲೇಬೇಕಿದೆ. ಜೊತೆಗೆ 2000 ಇಸ್ವಿಯಲ್ಲೇ ಜಾಗತಿಕ ನಾಯಕರ ಸಮಾವೇಶದಲ್ಲಿ ಮಿಲೇನಿಯಮ್ ಡೆವೆಲಪ್‌ಮೆಂಟ್ ಗೋಲ್ ಸಾಧಿಸುವಲ್ಲಿ ಸರಕಾರದ ಜೊತೆಗೆ ನಾಗರಿಕ ಸಮಾಜ ಮತ್ತು ಖಾಸಗಿ ವಲಯಗಳ ಸಹಯೋಗದೊಂದಿಗೆ ಎಲ್ಲಾ ಮಧ್ಯಸ್ಥಗಾರನ್ನು ಬಳಸಿಕೊಂಡು ಐಸಿಟಿಯನ್ನು ಅನುಷ್ಠಾನಗೊಳಿಸಲು ಒತ್ತಿ ಹೇಳಲಾಗಿತ್ತು.

**ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ:**




ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಯು ಬೋಧನೆ ಮತ್ತು ಕಲಿಯುವಿಕೆಯ ಪ್ರಕ್ರಿಯೆಗಳನ್ನು ಸುಲಭಗೊಳಿಸುವುದರ ಜೊತೆಗೆ ಶಿಕ್ಷಣದ ಗುರಿಗಳನ್ನು ಈಡೇರಿಸುವುದರ ಮೂಲಕ ಶಿಕ್ಷಣ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ ಎಂದು ಹೇಳಬಹುದು. ನಾವು ನಮ್ಮ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಬೇಕಾದರೆ ನವೀನ ಬೋಧನಾ ವಿಧಾನಗಳಿಗೆ ಹಾಗೂ ತಂತ್ರಗಳಿಗೆ ಪ್ರಾಮುಖ್ಯತೆಯನ್ನು ಕೊಡಲೇಬೇಕು. ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನದ ಉಪಯೋಗವು ಬಹು ಹಿಂದಿನ ಕಾಲದಿಂದಲೂ ಸಾಗಿ ಬಂದಿದೆ. ಅಂದಿನ ಕಾಲದ ಜನರು ತಮ್ಮ ಅಧ್ಯಯನ ಹಾಗೂ ಬೋಧನಾ ಕಾರ್ಯಕ್ಕಾಗಿ ಪಠ್ಯಪುಸ್ತಕಗಳು ಹಾಗೂ ಮುದ್ರಿತ ಸಾಮಗ್ರಿಗಳ ಕಾರ್ಯದೊಂದಿಗೆ ಪ್ರಾರಂಭ ಮಾಡಿದರು. ನಂತರ ಬೋಧನಾ ಕಲಿಕಾ ಸಾಮಗ್ರಿಗಳಾದ ಕಪ್ಪುಹಲಗೆ, ಚಿತ್ರಪಟಗಳು, ಮಾದರಿಗಳು, ನಕ್ಷೆಗಳು ಮುಂತಾದವು ಸೇರಿಕೊಂಡವು. ನಂತರ ರೇಡಿಯೊ, ಟಿ.ವಿ, ಟೇಪ್‌ರೆಕಾರ್ಡರ್ ಬಳಸಲಾಯಿತು. ಇತ್ತೀಚೆಗೆ ಯು-ಟ್ಯೂಬ್, ಕಂಪ್ಯೂಟರ್ ಬಳಸಿ ಬೋಧನೆ ಮಾಡುವ ಕಲೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲಾಯಿತು. ಕೋವಿಡ್

ಸಂದರ್ಭದಲ್ಲಂತೂ ಇಡೀ ವಿಶ್ವಕ್ಕೆ ಶಿಕ್ಷಣ ಒದಗಿಸುವ ಕೆಲಸವನ್ನು ಮಾಡಿದ್ದು ಮಾತ್ರ ತಂತ್ರಜ್ಞಾನವೆಂದೇ ಹೇಳಬಹುದು. ಅಂದಿನ ಸಂದರ್ಭದಲ್ಲಿ ಇ-ಕ್ಲಾಸ್ ರೂಮ್‌ಗಳ ಮೂಲಕ ಶಿಕ್ಷಣವನ್ನು ನೀಡಲಾಯಿತು. ಒಂದು ವೇಳೆ ತಂತ್ರಜ್ಞಾನದ ಬಳಕೆ ಇಲ್ಲದೇ ಹೋಗಿದ್ದರೆ ಕೋಟ್ಯಾನು ಕೋಟಿ ಮಕ್ಕಳ ಭವಿಷ್ಯ ಅಂಧಕಾರದಲ್ಲಿ ಮೊಳಗುತ್ತಿತ್ತು. ವಿವಿಧ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಪ್ರಯೋಗಿಕ ಬೋಧನೆಯ ಸಮಸ್ಯೆಗಳನ್ನು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಪರಿಹರಿಸಬಹುದಾಗಿದೆ.

ಡಬ್ಲು.ಕೆನ್ನೆಥ್ ರಿಚ್‌ಮಂಡ್‌ರವರ ಪ್ರಕಾರ-ಶೈಕ್ಷಣಿಕ ತಂತ್ರಶಾಸ್ತ್ರವು ಸಮರ್ಪಕವಾಗಿ ಕಲಿಕೆಯ ಸನ್ನಿವೇಶಗಳನ್ನು ವಿನ್ಯಾಸಗೊಳಿಸುವುದಕ್ಕೆ ಸಂಬಂಧಿಸಿದುದಾಗಿದೆ. ಅದು ಉತ್ತಮ ಬೋಧನಾ ಸಾಧನಗಳನ್ನು ಉತ್ಪಾದಿಸಲು ಬೋಧನೆ ಅಥವಾ ತರಬೇತಿಯ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿರುತ್ತದೆ.

ರಿಚ್‌ಮಂಡ್‌ರವರು ತಮ್ಮ ವ್ಯಾಖ್ಯೆಯಲ್ಲಿ ಶೈಕ್ಷಣಿಕ ತಂತ್ರಶಾಸ್ತ್ರದ ಮೂರು ಗುಣಲಕ್ಷಣಗಳನ್ನು ಹೇಳಿದ್ದಾರೆ. ಅವುಗಳೆಂದರೆ-

೧) ಸಮಂಜಸವಾದ ಕಲಿಕೆಯ ಸನ್ನಿವೇಶಗಳನ್ನು ವಿನ್ಯಾಸಗೊಳಿಸುವುದು

೨) ಬೋಧನೆ ಅಥವಾ ತರಬೇತಿಯ ಮತ್ತು ಕಲಿಕೆಯ ಉದ್ದೇಶಗಳನ್ನು ಸಾಧಿಸುವುದು

೩) ಕಲಿಕೆಯ ಉತ್ತಮ ಸಾಧನಗಳನ್ನು ಹೊರತರುವುದು.

**ಶೈಕ್ಷಣಿಕ ತಂತ್ರಜ್ಞಾನದ ಅರ್ಥ:**

ಬೋಧನೆ/ಕಲಿಕೆ ಪ್ರಕ್ರಿಯೆಯನ್ನು ಸುಲಭ, ಸರಳ, ಪರಿಣಾಮಕಾರಿಯಾಗಿ ಮಾಡಲು ವೈಜ್ಞಾನಿಕ, ತಾಂತ್ರಿಕ ಮತ್ತು ಮಾನಸಿಕ ತತ್ವಗಳು ಮತ್ತು ವಿಧಾನಗಳನ್ನು ಸರಿಯಾಗಿ ಬಳಸಿದಾಗ ಅದು ಶೈಕ್ಷಣಿಕ ತಂತ್ರಜ್ಞಾನದ ಅಡಿಯಲ್ಲಿ ಬರುತ್ತದೆ. ಹೊಸ ಆವಿಷ್ಕಾರಗಳು ನಡೆದಂತೆ ಅದರ ಅರ್ಥ, ವ್ಯಾಖ್ಯಾನ ಮತ್ತು ರೂಪದಲ್ಲೂ ಬದಲಾವಣೆಯಾಗುತ್ತದೆ. ಇಂದು, ವೈಜ್ಞಾನಿಕ ಮತ್ತು ತಾಂತ್ರಿಕ ಆವಿಷ್ಕಾರಗಳು ಮಾನವ ಜೀವನದ ಪ್ರತಿಯೊಂದು ಅಂಶವನ್ನು ಪ್ರಭಾವಿಸಿದೆ. ಶಿಕ್ಷಣ, ಬೋಧನೆ ಮತ್ತು ಕಲಿಕೆಯ ಮೇಲೂ ಅವುಗಳಿಂದ ಹೆಚ್ಚಿನ ಪರಿಣಾಮ ಬೀರಿದೆ. ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚಿನ ಸಂಶೋಧನೆಗಳು ಮತ್ತು ತನಿಖೆಗಳ ಪರಿಣಾಮವಾಗಿ,ಅಂತಹ ತಂತ್ರಗಳನ್ನು (ಅಂದರೆ ಕೌಶಲ್ಯಗಳು) ಅಭಿವೃದ್ಧಿಪಡಿಸಲಾಗಿದೆ, ಇದು ಶಿಕ್ಷಣದ ಎಲ್ಲಾ ಉದ್ದೇಶಗಳನ್ನು ಸಾಧಿಸಲು ಸಹಾಯ ಮಾಡುತ್ತದೆ.

ವಿಶೇಷವಾಗಿ ವಿಜ್ಞಾನವನ್ನು ಆಧರಿಸಿದ ಈ ಸಾಮರ್ಥ್ಯಗಳು ಮತ್ತು ಕೌಶಲ್ಯಗಳನ್ನು ಶೈಕ್ಷಣಿಕ ತಂತ್ರಜ್ಞಾನ ಎಂದು ಕರೆಯಲಾಗುತ್ತದೆ.

**"We need technology in every classroom and in every student and teacher's hand, because it is the pen and paper of our time, and it is the lens through which we experience much of our world."**

**– David Warlick**

ನಮ್ಮ ಶಾಲೆಗಳಲ್ಲಿ ಇಂದು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಹಾಗೂ ತಂತ್ರಜ್ಞಾನ ಸಮ್ಮಿಳಿತ ಕಲಿಕಾ ಕಾರ್ಯಕ್ರಮ (ಟ್ಯಾಲ್ಪ್) ಗಳು ಉಸಿರಾಗಿವೆ. ಇತ್ತೀಚೆಗೆ ಕಲಿಕೆಯನ್ನು ಇನ್ನಷ್ಟು ದೃಢಗೊಳಿಸುವ ದೃಷ್ಟಿಕೋನದಿಂದ ಕೇಂದ್ರ ಸರಕಾರದ ಎನ್ ಸಿ ಇ ಆರ್ ಟಿ ಪ್ರಾಯೋಜಿತ ಎ.ಟಿ.ಎಲ್ ಅಂದರೆ ಅಟಲ್ ಟಿಂಕರಿಂಗ್ ಲ್ಯಾಬ್ ಕೂಡ ಸೇರಿಕೊಂಡಿದ್ದು ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಅನುಕೂಲವಾಗಿದೆ.

ಈ ಮೇಲಿನ ಅನೇಕ ಸಂದರ್ಭಗಳಲ್ಲಿ ದೂರವಾಣಿ, ಅಂತರಜಾಲ, ಕಂಪ್ಯೂಟರ್-ಲ್ಯಾಪ್ ಟಾಪ್ ಗಳು ಆಪರೇಟಿಂಗ್ ಸಿಸ್ಟಂಗಳಾದ ಮಿಡಲ್‌ವೇರ್, ಎಂಟರ್‌ಪ್ರೈಸ್ ಸಾಫ್ಟವೇರ್, ಮಾಹಿತಿ ಸಂಗ್ರಹಣಾ ಮತ್ತು ವಿಲೇವಾರಿ ಯೂನಿಟ್‌ಗಳು ಹಾಗೂ ದೃಕ್ ಶ್ರವಣ ಉಪಕರಣಗಳ ಸಹಾಯದಿಂದ ಕಲಿಕೆಯನ್ನು ಆನಂದಕರ, ಪರಿಣಾಮಕಾರಿ ಮತ್ತು ಪ್ರಚೋದನಕಾರಿಯಾಗಿಸುತ್ತವೆ. ಇದರಿಂದ ಬಳಕೆದಾರರು ಮಾಹಿತಿಯನ್ನು ಪ್ರವೇಶಿಸಲು, ಸಂಗ್ರಹಿಸಲು, ರವಾನಿಸಲು, ಅರ್ಥಮಾಡಿಕೊಳ್ಳಲು ಮತ್ತು ಕಾರ್ಯಕುಶಲತೆಯಿಂದ ಸಕ್ರಿಯಗೊಳಿಸಲು ಸಾಧ್ಯವಾಗುತ್ತದೆ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಇತ್ತೀಚೆಗೆ ಶಿಕ್ಷಣಕ್ಕೆ ಮುಕ್ತ ಮತ್ತು ಸಾರ್ವತ್ರಿಕ ಪ್ರವೇಶ, ಸಮಾನತೆ, ಗುಣಮಟ್ಟದ ಕಲಿಕೆ ಮತ್ತು ಬೋಧನೆಯ ವಿತರಣೆ, ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಮತ್ತು ಹೆಚ್ಚು ಪರಿಣಾಮಕಾರಿ ಶಿಕ್ಷಣ ನಿರ್ಹವಣೆ (ಆಡಳಿತಾತ್ಮಕ + ಆರ್ಥಿಕವಾಗಿ) ಕೊಡುಗೆ ನೀಡುತ್ತಿದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಇಂದು ಇಂಟರ್ನೆಟ್ ಬಳಕೆ ಸ್ಥಿರವಾಗಿ ಬೆಳೆಯುತ್ತಿರುವುದು ಉತ್ತಮ ಬೆಳವಣಿಗೆ, ಆದರೂ ಶೈಕ್ಷಣಿಕ ಕೆಲಸಗಳಲ್ಲಿ ಮಕ್ಕಳು ಮತ್ತು ಶಿಕ್ಷಕರಿಗೆ ಇದರ ನೇರ ಲಾಭವಾಗುವಂತೆ ಮಾಡಲು ಇನ್ನೂ ಪ್ರಯತ್ನಿಸಲಾಗುತ್ತಿದೆ.

ಕ್ಲಿಷ್ಟಕರ ಪರಿಕಲ್ಪನೆಗಳನ್ನು ಶಿಕ್ಷಕರು ಮಕ್ಕಳಿಗೆ ತಿಳಿಸುವ/ ಹೆಣಗಾಡುವ ಬಹಳಷ್ಟು ಸನ್ನಿವೇಶಗಳು ಸಮ್ಮ ಶಾಲಾ ಭೇಟಿಯ ಸಮಯದಲ್ಲಿ ಕಾರ್ಯಾಗಾರಗಳಲ್ಲಿ ವ್ಯಕ್ತವಾಗಿರುವುದುಂಟು. ಒಂದೇ ಒಂದು ಚಿತ್ರ, ವಿಡಿಯೋ ಅಥವಾ ತ್ರಿಡಿ ಪ್ರಿಂಟರ್ಗಳು ಅತೀ ಕಡಿಮೆ ಅವಧಿಯಲ್ಲಿ ಮಕ್ಕಳ ಮನಸನ್ನು ತಲುಪುತ್ತವೆ.

**ತಂತ್ರಜ್ಞಾನ ಆಧಾರಿತ ಕಲಿಕೆ ಕೇವಲ ವಿಜ್ಞಾನ ವಿಷಯಗಳಿಗೆ ಸೀಮಿತವೇ?**

**ಭಾಷಾ ತರಗತಿ ಕೋಣೆಯಲ್ಲಿ ಐಸಿಟಿ ಕಲರವ :**

1. **"ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ"** ಎಂಬ ಪದ್ಯದ ಸಾಲುಗಳನ್ನು ಓದಿದಾಗ ಆಗುವ ಆನಂದ ಚಿತ್ರ ಪರದೆಯ ಮೇಲೆ ನೋಡಿದಾಗ ಸತ್ಯವಾಗಿಯೂ ಪರಮಾನಂದ ಅಲ್ಲವೇ?. ಭಾಷೆಯ ಆಳ-ಹರವುಗಳನ್ನು ರೇಡಿಯೋ, ಟಿವಿ ಜೊತೆಗೆ ಇಂದಿನ ಇಂಟರ್ ನೆಟ್ ಸಾಧನಗಳ ಮುಖಾಂತರ ಕಲಿಸಿದಾಗ ಅದರ ಅನುಭವ ಮತ್ತು ಸಾರ್ಥಕತೆಯಿಂದಾಗಿ ಅಭಿವ್ಯಕ್ತಿ ಸ್ವಾತ್ಂತ್ರ್ಯ ಮತ್ತು ಪ್ರಶಂಸೆಯಂತಹ ಮೌಲ್ಯಗಳು ವೃದ್ಧಿಯಾಗುತ್ತವೆ.
2. ಕೇವಲ ಆಡಿಯೋ (ಶ್ರವಣ) ಮಾಧ್ಯಮ ಬಳಸಿ, ಮಕ್ಕಳಲ್ಲಿ ಕೇಳುವ, ತಿಳಿದುಕೊಳ್ಳುವ ಹಾಗೂ ಮನಸ್ಸಿನ ಕೇಂದ್ರೀಕರಿಸುವ ತಂತ್ರ ಕಲಿಕೆಯ ಭಾಗವೇ ಆಗಿದೆ.
3. ಹೊಸ ಪದಗಳ ಬಳಕೆ, ಅವುಗಳ ಅರ್ಥ, ವ್ಯಾಕರಣಾಂಶಗಳ ಅಧ್ಯಯನ ದೃಕ್-ಶ್ರವಣೋಪಕರಣಗಳ ಮೂಲಕ ಇನ್ನೂ ಕಲಿಕೆಯನ್ನು ಸದೃಢಗೊಳಿಸುತ್ತದೆ.
4. ಇತ್ತೀಚೆಗೆ ಕಹೂತ್, ಸ್ಟೆಲ್ಲಾರಿಯಂ,ಐ ನ್ಯಾಚುರಾಲಿಸ್ಟ,ಸ್ವಯಂ,ಪಿರಿಯಾಡಿಕ್ ಟೇಬಲ್,ಕ್ವಿಜ್ಲೆಟ್ ಮುಂತಾದ ಆಪಗಳು ಕೂಡಾ ಇ-ಕಲಿಕೆಯನ್ನು ಪ್ರೋತ್ಸಾಹಿಸುತ್ತವೆ.
5. ಭಾಷಾ ಪ್ರಯೋಗಾಲಯದಲ್ಲಿ ಭಾಷೆಯನ್ನು ಸಂಗೀತಮಯವೂ, ಸರಳವೂ, ಆಕರ್ಷಕವಾಗಿಯೂ, ಅಡೆತಡೆರಹಿತವಾಗಿಯೂ, ಎಲ್ಲಾ ಕಲಿಕಾ ಹಂತದ ಮಕ್ಕಳಿಗೂ ತುಂಬಾ ಪರಿಣಾಮಕಾರಿಯಾಗಿ ಐಸಿಟಿ ಬಳಸಬಹುದು.

**ಅಟಲ್ ಟಿಂಕರಿಂಗ್ ಲ್ಯಾಬ್**

ಕೇಂದ್ರ ಸರ್ಕಾರವು ನೀತಿ ಆಯೋಗದಡಿ ಅಟಲ್ ಆವಿಷ್ಕಾರ್ ಮಿಷನ್‌ಅನ್ನ ಪ್ರಾರಂಭಿಸಿದ್ದು, ಇದರಲ್ಲಿ ರಾಷ್ಟ್ರದಾದ್ಯಂತ 2018 - 19 ನೇ ಸಾಲಿನಿಂದ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಯಿತು. ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸುವ ಉದ್ದೇಶವನ್ನು

ಹೊಂದಿದ್ದು ಅಟಲ್ ಟಿಂಕರಿಂಗ್ ಲ್ಯಾಬ್ ಹೊಂದಿರುವ ಶಾಲೆಗಳು ಈ ಲ್ಯಾಬ್‌ಗಳನ್ನು ಬಳಸಿಕೊಂಡು ವಿಜ್ಞಾನ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ವೈಜ್ಞಾನಿಕಮನೋಭಾವ ಬೆಳೆಸುತ್ತಿರುವುದು ಕಂಡುಬಂದಿರುತ್ತದೆ. ಕೇಂದ್ರ ನೀತಿ ಆಯೋಗವು ಇದಕ್ಕೆ 20 ಲಕ್ಷ ರೂಪಾಯಿಗಳ ಅನುದಾನ ನೀಡುತ್ತದೆ. ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು, ಸಮಾಜದಲ್ಲಿಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅನುವಾಗುವಂತೆ ಸಂಶೋಧನೆ ಕೈಗೊಳ್ಳಲು ಇದರಿಂದ ಸಾಧ್ಯ. ಪರಿಸರ, ಕೈಗಾರಿಕೆ, ಕೃಷಿ, ಇಂಜನಿಯರಿಂಗ್ ಮುಂತಾದ ವಿಭಾಗಗಳಲ್ಲಿ ಮಕ್ಕಳು ಯೋಜನೆಗಳನ್ನು ಕೈಗೊಂಡು ವಿಜ್ಞಾನಿಯಾಗುವ ಕನಸು ಕಟ್ಟಿಕೊಡುವಲ್ಲಿ
ಅಟಲ್ ಟಿಂಕರಿಂಗ್ ಲ್ಯಾಬ್ ಆಶಾಕಿರಣವಾಗಿದೆ. ಡಯಟ್ ವತಿಯಿಂದ ಸದರಿ ಲ್ಯಾಬ್ ಗಳ ಮೇಲುಸ್ತುವಾರಿ ಮಾಡಲಾಗುತ್ತಿದೆ. ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಉತ್ತೇಜನಗೊಳಿಸಲು ಪ್ರಸ್ತುತ ಭಾರತದಲ್ಲಿ ನೂರಾರು ಇ-ಕಲಿಕಾ ಆಪ್ ಗಳು ಪ್ರಚಲಿತದಲ್ಲಿವೆ. ಅವುಗಳಲ್ಲಿ ಕೆಲವು ಬೈಜುಸ್, ವೇದಾಂತು, ಖಾನ್ ಅಕ್ಯಾಡೆಮಿ, ಅನ್‌ಅಕ್ಯಾಡೆಮಿ, ಮೆರಿಟ್‌ನೇಷನ್, ವಿದ್ಯಾಕುಲ್, ಡೌಟ್‌ನಟ್,ಇಂಡಿಗೊಲರ್ನ್, ಸಿಎಕ್ಲಬ್‌ಇಂಡಿಯಾ, ಟೆಸ್ಟ್‌ಬುಕ್, ಅಡ್ಡಾ247, ಗ್ರೇಡ್‌ಅಪ್, ಸಿಂಪಲ್‌ಐಲರ್ನ್, ಯುಡೆಮಿ, ಸೋಲೋಲರ್ನ್, ಕೋಡಿಂಗ್‌ನಿಂಜಾಸ್,ಜಿಗಸಾ ಅಕ್ಯಡೆಮಿ ಇತ್ಯಾದಿ ಗಳು ಸಮಾಜದ ಎಲ್ಲಾ ಸ್ತರದ ಜನರಿಗೆ ಇ-ಕಲಿಕೆಯನ್ನು ಒದಗಿಸುತ್ತವೆ.

ಕಲಿಕೆಯ ಪ್ರಾಯೋಗಿಕ ಭಾಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಇದು ಅರಿವಿನ, ಪರಿಣಾಮಕಾರಿ ಮತ್ತು ಸೈಕೋಮೋಟರ್ ಉದ್ದೇಶಗಳಿಗೆ ಸಂಬಂಧಿಸಿದೆ.- ನಿಯಮಗಳು ಮತ್ತು ಆವಿಷ್ಕಾರಗಳು ಶೈಕ್ಷಣಿಕ ತಂತ್ರಜ್ಞಾನದ ಆಧಾರವಾಗಿದೆ. ಪರಿಣಾಮಕಾರಿ ಕಲಿಕೆಗಾಗಿ ನವೀನ ವಿಧಾನಗಳ ಅಭಿವೃದ್ಧಿಗೆ ಇದು ಸಕಾರಾತ್ಮಕ ಒತ್ತು ನೀಡುತ್ತದೆ. ಶೈಕ್ಷಣಿಕ ತಂತ್ರಜ್ಞಾನವು ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ವೈಜ್ಞಾನಿಕ, ವಸ್ತುನಿಷ್ಠ, ಸ್ಪಷ್ಟ, ಸರಳ, ಸುಲಭ, ಆಸಕ್ತಿದಾಯಕ ಮತ್ತು ಪರಿಣಾಮಕಾರಿ ಮಾಡುತ್ತದೆ. ಶೈಕ್ಷಣಿಕ ತಂತ್ರಜ್ಞಾನವು ಬೋಧನಾ ಸಮಸ್ಯೆಗಳನ್ನು ಪರಿಹರಿಸಲು ಸರಿಯಾದ ಮಾರ್ಗದರ್ಶನ ನೀಡುತ್ತದೆ.

ಕಲಿಕೆಯ ಗುರಿಗಳನ್ನು ಹೊಂದಿಸುವುದು, ವಿದ್ಯಾರ್ಥಿಗಳ ಆರಂಭಿಕ ನಡವಳಿಕೆಯನ್ನು ಪರೀಕ್ಷಿಸುವುದು, ಸೂಕ್ತವಾದ ಪಠ್ಯಕ್ರಮವನ್ನು ಆಯ್ಕೆ ಮಾಡುವುದು ಮತ್ತು ಸಂಘಟಿಸುವುದು, ಸೂಕ್ತವಾದ ಬೋಧನಾ-ಕಲಿಕಾ ವಿಧಾನಗಳು, ತಂತ್ರಗಳು ಮತ್ತು ಪೋಷಕ ಸಾಮಗ್ರಿಗಳಂತಹ ಬೋಧನೆ/ಕಲಿಕೆ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಮಾಡಲು ಇದು ಸರಿಯಾದ ಮಾರ್ಗದರ್ಶನವನ್ನು ನೀಡುತ್ತದೆ.

- ಆಲೋಚನೆಗಳ ವಿನಿಮಯದಲ್ಲಿ ತೊಡಗಿಸಿಕೊಳ್ಳಲು ಶಿಕ್ಷಕರು ಮತ್ತು ಕಲಿಯುವವರ ನಡುವೆ ಪರಿಣಾಮಕಾರಿ ಸಂವಹನ ಸಾಧನಗಳನ್ನು ಇದು ನೀಡುತ್ತದೆ.
- ಇದು ಎಲ್ಲಾ ರೀತಿಯ ಕಲೆಗಳು, ವಿಧಾನಗಳು, ವಸ್ತುಗಳು, ಕೌಶಲ್ಯಗಳು, ತತ್ವಗಳು ಮತ್ತು ವಿಜ್ಞಾನ, ಮನೋವಿಜ್ಞಾನ ಮತ್ತು ತಂತ್ರಜ್ಞಾನದ ಉಪಕರಣಗಳ ಬಳಕೆಯನ್ನು ಒಳಗೊಂಡಿದೆ.
- ಶೈಕ್ಷಣಿಕ ತಾಂತ್ರಿಕ ಉದ್ದೇಶಗಳನ್ನು ಸಾಧಿಸಲು ಅಗತ್ಯವಿರುವ ಕಲಿಕೆಯ ಪರಿಸ್ಥಿತಿಗಳನ್ನು ವ್ಯವಸ್ಥೆಗೊಳಿಸಲು ಮತ್ತು ನಿಯಂತ್ರಿಸಲು ಇದನ್ನು ಬಳಸಬಹುದು.
- ನಮ್ಮ ದೈನಂದಿನ ಜೀವನದಲ್ಲಿ ಕಡಿಮೆ ಶಕ್ತಿ ಮತ್ತು ಶ್ರಮದಿಂದ ಹೆಚ್ಚಿನ ಕೆಲಸವನ್ನು ಮಾಡಲು ವಿಜ್ಞಾನ ಮತ್ತು ತಂತ್ರಜ್ಞಾನವು ಹೇಗೆ ಸಹಾಯ ಮಾಡುತ್ತದೆ, ಅದೇ ರೀತಿಯಲ್ಲಿ ಶೈಕ್ಷಣಿಕ

- ತಂತ್ರಜ್ಞಾನವು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಶಕ್ತಿ ಮತ್ತು ಸಮಯದ ವ್ಯರ್ಥವನ್ನು ನಿಯಂತ್ರಿಸುತ್ತದೆ.
- ನಡವಳಿಕೆಯ ಬದಲಾವಣೆಯನ್ನು ಅಳೆಯಲು ಮತ್ತು ಕಲಿಕಾ ಪ್ರಕ್ರಿಯೆಯ ಫಲಿತಾಂಶಗಳನ್ನು ಪರಿಶೀಲಿಸಲು ಸೂಕ್ತವಾದ ಮೌಲ್ಯಮಾಪನ ವಿಧಾನಗಳ ಅಭಿವೃದ್ಧಿಗೆ ಇದು ಒತ್ತು ನೀಡುತ್ತದೆ.
- ಮೌಲ್ಯಮಾಪನ ಪ್ರಕ್ರಿಯೆಯ ನಂತರ, ವಿದ್ಯಾರ್ಥಿಗಳ ಅಂತಿಮ ನಡವಳಿಕೆಯನ್ನು ಪರಿಶೀಲಿಸುವ ಮೂಲಕ, ನಿರೀಕ್ಷಿತ ಬಲವರ್ಧನೆ ಮತ್ತು ಅಗತ್ಯವಿರುವ ಬೆಂಬಲವನ್ನು ಒದಗಿಸಲು ಸಹ ಒತ್ತು ನೀಡಲಾಗುತ್ತದೆ.

**ಶೈಕ್ಷಣಿಕ ತಂತ್ರಜ್ಞಾನವನ್ನು ಬಳಸುವುದರೊಂದಿಗೆ ಬರುವ ವಿವಿಧ ಪ್ರಯೋಜನಗಳು ಈ ಕೆಳಗಿನಂತಿವೆ:**

. ಇದು ಕಲಿಯುವವರ ಸಂವಹನ ಕೌಶಲ್ಯ ಮತ್ತು ಶಾಲೆ ಕಾರ್ಯಸ್ಥಳದ ಕ್ಷೇತ್ರದಲ್ಲಿ ಕಾರ್ಯಕ್ಷಮತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಇದು ಕಲಿಯುವವರಿಗೆ ಯಾವುದೇ ಸಮಯದಲ್ಲಿ ಎಲ್ಲಿಂದಲಾದರೂ ಇಂಟರ್ನೆಟ್ ಅನ್ನು ಪ್ರವೇಶಿಸಲು ಅನುಮತಿಸುತ್ತದೆ. ಅಂತರ್ಜಾಲವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ, ಇಂದಿನ ಜಗತ್ತಿನಲ್ಲಿ ವಿದ್ಯಾರ್ಥಿಗಳು ಯಾವುದೇ ಸಮಯದಲ್ಲಿ ಎಲ್ಲಿಂದಲಾದರೂ ಇಂಟರ್ನೆಟ್ ಅನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ.

ಇದರಿಂದ ಅವರು ತಮ್ಮ ಕಾರ್ಯಯೋಜನೆಗಳನ್ನು ಮತ್ತು ಸಂಶೋಧನೆಗಳನ್ನು ಮಾಡಲು ಯಾವುದೇ ಸ್ಥಳಕ್ಕೆ ಪ್ರಯಾಣಿಸದೆ ಅಥವಾ ನಿರ್ದಿಷ್ಟ ಸಮಯಕ್ಕಾಗಿ ಕಾಯದೆಯೇ ಮಾಡಬಹುದು.

ಹೊಸ ಕೌಶಲ್ಯಗಳನ್ನು ಕಲಿಯುವುದು ಮತ್ತು ಹೊಸ ಜ್ಞಾನವನ್ನು ಪಡೆದುಕೊಳ್ಳುವುದು ಕಲಿಯುವವರು ಆನಂದಿಸಲು ಸಾಧ್ಯವಾಗಬೇಕಾದ ಜೀವನದ ಎರಡು ಪ್ರಮುಖ ಅಂಶಗಳಾಗಿವೆ. ಶೈಕ್ಷಣಿಕ ತಂತ್ರಜ್ಞಾನದ ಬಳಕೆಯ ಮೂಲಕ, ಕಲಿಯುವವರು ಈ ಕೌಶಲ್ಯಗಳನ್ನು ಪಡೆದುಕೊಳ್ಳಬಹುದು ಮತ್ತು ಆನ್

ಲೈನ್‌ನಲ್ಲಿ ಲಭ್ಯವಿರುವ ವಿವಿಧ ಕಾರ್ಯಕ್ರಮಗಳ ಮೂಲಕ ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಬಹುದು. ಈ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ತಮ್ಮ ಕೆಲಸ ಅಥವಾ ಅಧ್ಯಯನದ ಕ್ಷೇತ್ರಗಳಿಗೆ ಆಸಕ್ತಿದಾಯಕ ಮತ್ತು ಉಪಯುಕ್ತವಾದ ವಿವಿಧ ವಿಷಯಗಳ ಬಗ್ಗೆ ಕಲಿಯಲು ಅವಕಾಶವನ್ನು ನೀಡುತ್ತವೆ.

ಇದು ಕಲಿಯುವವರಿಗೆ ಹೊಸ ತಾಂತ್ರಿಕ ಪ್ರಗತಿಗಳೊಂದಿಗೆ ನವೀಕೃತವಾಗಿರಲು ಸಹಾಯ ಮಾಡುತ್ತದೆ. ಇತ್ತೀಚಿನ ತಾಂತ್ರಿಕ ಪ್ರಗತಿಯೊಂದಿಗೆ ನವೀಕೃತವಾಗಿರಲು ಸಾಧ್ಯವಾಗುವ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳ ಕುರಿತು ತಮ್ಮ ಜ್ಞಾನವನ್ನು ಸುಧಾರಿಸಲು ಮತ್ತು ಭವಿಷ್ಯದಲ್ಲಿ ಅವರು ಬಳಸಬಹುದಾದ ಹೊಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ.

ಈ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶಗಳು ದೊರೆಯುವ ಸಾಧ್ಯತೆಗಳು ಹೆಚ್ಚು, ಏಕೆಂದರೆ ಅವರು ವಿವಿಧ ಕ್ಷೇತ್ರಗಳಲ್ಲಿನ ಇತ್ತೀಚಿನ ಪ್ರವೃತ್ತಿಗಳ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುತ್ತಾರೆ ಮತ್ತು ವಿವಿಧ ಉದ್ದೇಶಗಳಿಗಾಗಿ ಹೊಸ ತಂತ್ರಜ್ಞಾನಗಳನ್ನು ಹೇಗೆ ಬಳಸಬಹುದು? ಎಂಬುದನ್ನು ತಿಳಿದುಕೊಳ್ಳುವ ಮೂಲಕ ಜಾಗತಿಕವಾಗಿ ಉದ್ಯೋಗಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ಸಮರ್ಥರಾಗುತ್ತಾರೆ.

ತಂತ್ರಜ್ಞಾನವು ಬೋಧನೆಯನ್ನು ಸುಲಭಗೊಳಿಸುತ್ತದೆ. ವಿದ್ಯಾರ್ಥಿಗಳಿಗೆ ಕಷ್ಟವೆನಿಸುವ ಹಲವಾರು ಸೈದ್ಧಾಂತಿಕ ವಿವರಣೆಗಳನ್ನು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವ ಮೂಲಕ ಸುಲಭವಾಗಿ ಅರ್ಥವಾಗುವಂತೆ ಮಾಡಬಹುದು. ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಜ್ಞಾನವನ್ನು ಹೇಗೆ ಅನ್ವಯಿಸಬಹುದು? ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ. ಯಾವುದೇ ರೀತಿಯ ಪಾಠ ಅಥವಾ ಸೂಚನೆಗಳನ್ನು ನೀಡಲು ಮತ್ತು ತರಗತಿಯೊಳಗೆ ಗ್ರಹಿಕೆಯ ಮಟ್ಟವನ್ನು ಸುಧಾರಿಸಲು ಪ್ರೊಜೆಕ್ಟರ್‌ಗಳು ಮತ್ತು ಕಂಪ್ಯೂಟರ್ ಪ್ರಸ್ತುತಿಗಳನ್ನು ಬಳಸಬಹುದು.

.ವಿದ್ಯಾರ್ಥಿಗಳ ಪ್ರಗತಿಯನ್ನು ಟ್ರ್ಯಾಕ್ ಮಾಡಲು ತಂತ್ರಜ್ಞಾನವು ಸಹಾಯ ಮಾಡುತ್ತದೆ. ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯ ದಾಖಲೆಗಳನ್ನು ಸಂಗ್ರಹಿಸಿಡಲು ಡೈರಿ ಮತ್ತು ಟಿಪ್ಪಣಿಗಳು ಅಗತ್ಯವಿಲ್ಲ. ವಿದ್ಯಾರ್ಥಿಗಳ ವೈಯಕ್ತಿಕ

ಸಾಧನೆಗಳನ್ನು ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುವ ಆ್ಯಪ್ ಮತ್ತು ಸಾಧನಗಳನ್ನು ಅವಲಂಬಿಸಬಹುದು. ಜೊತೆಗೆ ಶಾಲೆಯು ಈ ಉದ್ದೇಶವನ್ನು ಪೂರೈಸುವ ವೈಯಕ್ತೀಕರಿಸಿದ ಸಾಫ್ಟವೇರ್ ಅನ್ನು ಸಹ ಅಭಿವೃದ್ಧಿಪಡಿಸಬಹುದು. ತಂತ್ರಜ್ಞಾನವು ಸಹಯೋಗವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತದೆ

ಒಂದು ವರ್ಗ ಕೋಣೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದಾಗ ವರ್ಗಕೋಣೆಯ ನಿರ್ವಹಣೆ ಶಿಕ್ಷಕರಿಗೆ ತುಂಬಾ ಕಷ್ಟವೆನಿಸಬಹುದು. ಅಂತಹ ಸಂದರ್ಭದಲ್ಲಿ ತರಗತಿಯ ಸಮರ್ಪಕ ನಿರ್ವಹಣೆಯನ್ನು ತಂತ್ರಜ್ಞಾನವು ಸಾಧ್ಯವಾಗಿಸುತ್ತದೆ. ಗುಂಪು ಯೋಜನೆಯಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಆನ್ಲೈನ್ ಪರಿಕರಗಳು ಮತ್ತು ಅಪ್ಲಿಕೇಶನ್ಗಳು ಸಾಕಷ್ಟು ಸಹಾಯ ಮಾಡುತ್ತದೆ.

**ನೀವು ಶಾಲಾ ಮೇಲ್ವಿಚಾರಕರಾಗಿ ಅಥವಾ ಮುಖ್ಯಶಿಕ್ಷಕರಾಗಿ ವಿದ್ಯಾರ್ಥಿಗಳ ಕಲಿಕೆಗೆ ತಂತ್ರಜ್ಞಾನ ಆಧಾರಿತ ಕಲಿಕೆಯನ್ನು ಹೇಗೆ ಬೆಂಬಲಿಸುತ್ತೀರಿ? ಡಿಜಿಟಲ್ ಸಂಪನ್ಮೂಲ ಮತ್ತು ತರಗತಿ ನಿರ್ವಹಣೆಯನ್ನು ಹೇಗೆ ಗುರುತಿಸುತ್ತೀರಿ?**

## 2.10 ಮಕ್ಕಳ ಕಲಿಕೆಗೆ ಹೊಸ ಚೇತನವಾದ ರಚನಾವಾದ:

ಮಕ್ಕಳ ಶಿಕ್ಷಣ ಹಕ್ಕು ಜಾರಿಯಾಗಿದೆ. ಶಿಕ್ಷಣ ಇಲಾಖೆಯಲ್ಲಿ ದಿನಮಾನಕ್ಕೆ ತಕ್ಕಂತೆ ಬದಲಾವಣೆಯ ಅಲೆ ಜೋರಾಗಿ ಬೀಸುತ್ತಿದೆ. ಅನೇಕ ನವೀನ ಯೋಜನೆಗಳು ರೂಪಗೊಂಡು ಅನುಷ್ಠಾನಗೊಳ್ಳುತ್ತಿವೆ. ವಿದ್ಯಾರ್ಥಿಯು ಶಾಲೆಯಲ್ಲಿ ಕಲಿಯುವ ಕಲಿಕೆ ಬದುಕಿನುದ್ದಕ್ಕೂ ಆನಂದದ ನೆನಪಾಗಿ ಉಳಿಯಬೇಕು, ಶಿಕ್ಷಣ ಮತ್ತು ಕಲಿಕೆಗಳು ಅಖಂಡ ಪ್ರಕ್ರಿಯೆಗಳಾಗಬೇಕು. ಮಕ್ಕಳ ಮನಸ್ಸು ಬಲವಂತದಿಂದ ಅರಳಬಾರದು, ಅದು ಸಹಜವಾಗಿ ಅರಳಲು ಅವಕಾಶ ಕೊಡಬೇಕು, ಕಲಿಕೆ ಎನ್ನುವುದು ಅವರಿಗೆ ಆನಂದದಾಯಕ ಚಟುವಟಿಕೆಯಾಗಬೇಕು ಎನ್ನುವುದೇ ಆಧುನಿಕ ಶಿಕ್ಷಣದ ಮುಖ್ಯ ಗುರಿಶಿಕ್ಷಣದ ಗುಣಮಟ್ಟಕ್ಕೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-2005 ಹಾಗೂ ಶಿಕ್ಷಣ ಹಕ್ಕು-2009 ಹೆಚ್ಚು ಆದ್ಯತೆ ನೀಡಿವೆ. ಶಾಲಾ ವಯಸ್ಸಿನ ಎಲ್ಲಾ ಮಕ್ಕಳೂ ಶಾಲೆಗೆ ಬರುವಂತಾಗಿ ಆ ಹಂತದ ಕಲಿಕೆಯನ್ನು ಯಶಸ್ವಿಗೊಳಿಸಬೇಕು. ಅದರಿಂದ ಕಲಿಕೆಯನ್ನು ಬಲಗೊಳಿಸಲು ಮಹತ್ವದ ಬದಲಾವಣೆಗಳನ್ನು ಕಲಿಕಾ ಪರಿಸರದಲ್ಲಿ ಕಾಣುತ್ತಿದ್ದೇವೆ. ಇಂತಹ ಮಹತ್ವಗಳಲ್ಲಿ ರಚನಾತ್ಮಕ ಕಲಿಕೆ ಇಂದು ಹೆಚ್ಚು ಮೌಲ್ಯ ಪಡೆಯುತ್ತಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸಂರಚನಾತ್ಮಕ ಕಲಿಕಾ ವಿಧಾನವನ್ನು ಬಳಸುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದೆ.

ರಚನಾತ್ಮಕವಾದದಲ್ಲಿ ಕಲಿಕೆಯನ್ನು "ಜ್ಞಾನ ಕಟ್ಟಿಕೊಳ್ಳುವ" ಪ್ರಕ್ರಿಯೆ ಎಂದು ಅರ್ಥೈಸಿಕೊಳ್ಳಬಹುದು. ಈ ಪ್ರಕ್ರಿಯೆಯಲ್ಲಿ ಮಗು ಎಷ್ಟು ಕಲಿಯಿತು? ಎನ್ನುವುದಕ್ಕಿಂತಲೂ ಮಗು ಹೇಗೆ ಕಲಿಯಿತು? ಎನ್ನುವುದು ಮುಖ್ಯವಾಗುತ್ತದೆ.

ನಮ್ಮ ವಿದ್ಯಾರ್ಥಿಗಳು ಮಾಹಿತಿಯನ್ನು ಕಲಿಯಬೇಕು. ಅವನ್ನು ತಮ್ಮದಾದ ಜ್ಞಾನವನ್ನಾಗಿಸಿಕೊಳ್ಳಬೇಕು. ಆ ಜ್ಞಾನಕ್ಕೆ ಒಂದು ಸಾರ್ವತ್ರಿಕ ಪ್ರಸ್ತುತತೆ ಇರಬೇಕು. ಅಂತಹ ಜ್ಞಾನದ ಗಳಿಕೆಯೇ ನಿಜವಾದ ಕಲಿಕೆ. ಅಂತಹ ಜ್ಞಾನ ಗಳಿಕೆಯನ್ನು ಅನುಕೂಲಿಸುವುದೇ ತರಗತಿ ಶಿಕ್ಷಣದ ಮೂಲ ಆಶಯ.

ರಚನಾವಾದಿ ತತ್ವದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವ ಅಭಿವ್ಯಕ್ತಿ ಇದೆ. ಮಕ್ಕಳು ತಮ್ಮ ತಮ್ಮ ಜ್ಞಾನವನ್ನು ತಮ್ಮ ತಮ್ಮದೇ ರೀತಿಗಳಲ್ಲಿ ಕಟ್ಟಿಕೊಳ್ಳುತ್ತಾರೆ. ಅಂತಹ ಕಲಿಕೆಗೆ ಅವಕಾಶ ಮಾಡಿಕೊಟ್ಟಾಗ ಆ ಕಲಿಕೆ ವ್ಯಕ್ತಿತ್ವದ ಒಂದು ಭಾಗವೇ ಆಗಿ ಬಿಡುತ್ತದೆ. ಅದಕ್ಕಾಗಿ ಕಲಿಕಾ ಅನುಭವಗಳನ್ನು ತರಗತಿಯಲ್ಲಿ ಹೇಗೆ ನೀಡಲಾಗುತ್ತಿದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಕರಿಗೆ ತರಗತಿಯಲ್ಲಿ ರಚನಾತ್ಮಕ ಕಲಿಕೆ ಹೇಗೆ ನಡೆಸಬೇಕು ಎಂಬುದರ ಕುರಿತಾಗಿ ಕಳೆದ ಕೆಲ ವರ್ಷಗಳಿಂದ ತರಬೇತಿಯನ್ನು ನೀಡಲಾಗುತ್ತಿದೆ.

ರಚನಾತ್ಮಕ ಕಲಿಕೆ ಎಂದರೆ ಕನ್ನಡ ಅನುವಾದ. ಇದರ ಅರ್ಥ “ಜೋಡಿಸು. ಹಂತಹಂತವಾಗಿ ಹೊಂದಿಸು” ಎಂದಾಗುತ್ತದೆ. ಜ್ಞಾನವನ್ನು ಹಂತಹಂತವಾಗಿ ಅಥವಾ ಕ್ರಮವಾಗಿ ಜೋಡಿಸುವ ಪರಿಕಲ್ಪನೆಯೇ ರಚನಾವಾದದ ತಿರುಳು. ತನಗೆ ತಿಳಿದಿರುವ ಜ್ಞಾನ ಅಥವಾ ಅನುಭವಗಳನ್ನು ಹೊಸ ಕಲಿಕೆ ಅಥವಾ ಪರಿಕಲ್ಪನೆಗೆ ಹೊಂದಿಸಿ ಅರಿಯುವ/ಕಲಿಯುವ ವಿಧಾನವೇ ರಚನಾತ್ಮಕ ಕಲಿಕಾ ವಿಧಾನ.

ಕಲಿಕೆಯಲ್ಲಿ ಅರ್ಥಪೂರ್ಣ ಕಲಿಕೆಯು ಕಲಿಯುವವರ ಆಸಕ್ತಿಯ ಮೇಲೆ ಅವಲಂಬಿಸಿದೆ. ರಚನಾತ್ಮಕ ಕಲಿಕಾ ವಿಧಾನದಲ್ಲಿ, ಜ್ಞಾನರಚನೆ ಮತ್ತು ಬಹು ಆಯಾಮದ ಕಲಿಕೆಯು ಕಲಿಕಾ ಪರಿಸರದ ಮೇಲೆ ಅವಲಂಬಿತವಾಗಿದೆ. ಕಲಿಕಾರ್ಥಿಯು ಪರಿಕಲ್ಪನೆಯ ಪರಿಪಕ್ವತೆಗೆ ಬೇರೆ ಬೇರೆ ಹಾದಿ/ ಆಯಾಮದಲ್ಲಿ ವಿಚಾರಶೀಲರಾಗಿರಬೇಕು. ಈ ನಿಟ್ಟಿನಲ್ಲಿ ನೀಡುವ ವಿವರಣೆಗಳಿಗೆ ಶಿಕ್ಷಕರು ಅಂದರೆ ಅನುಕೂಲಿಸುವವರು ನಮ್ಯವಾಗಿ ಸ್ಪಂದನೆ ನೀಡುತ್ತಾ ಸರಿಯಾದ ದಿಕ್ಕಿನಲ್ಲಿ ಕಲಿಕೆಯನ್ನು ಮುಂದುವರೆಸುವಂತೆ ಪ್ರೇರೇಪಿಸಬೇಕು.

ಕಲಿಕೆಯು ರಚನಾತ್ಮಕ ವಿಧಾನದಲ್ಲಿ ಆಗಬೇಕಾದರೆ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಥವಾ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶಗಳೆಂದರೆ, ಕಲಿಕೆಯು ವಿಶ್ವಾಸಾರ್ಹವಾದ ಹಾಗೂ ನಿಜ ಜೀವನದ ವಾಸ್ತವಕ್ಕೆ ಸಂಬಂಧಿಸಿದ ಪರಿಸರಕ್ಕೆ ಹೊಂದಿಕೊಂಡಿರಬೇಕು. ಕಲಿಕೆಯು ಸಾಮಾಜಿಕ ಮತ್ತು ನೈತಿಕತೆಯ ತಳಹದಿಯಲ್ಲಿ ಒಳಗೊಂಡಿರಬೇಕು. ಕಲಿಕಾಂಶವು ಹಾಗೂ ಕೌಶಲವು ಕಲಿಕಾರ್ಥಿಯ ಹಿಂದಿನ ಜ್ಞಾನದ ಚೌಕಟ್ಟಿನಲ್ಲಿರಬೇಕು. ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ರೂಪಣಾತ್ಮಕವಾಗಿ ಮುಂದಿನ ಕಲಿಕೆಗೆ ಅನುಕೂಲವಾಗುವಂತೆ ಮಾಡಬೇಕು. ವಿದ್ಯಾರ್ಥಿಗಳು ಸ್ವ-ನಿಯಂತ್ರಣ, ಸ್ವ-ಕಲಿಕೆ, ಸ್ವ-ಅವಲೋಕನ ಮಾಡುವುದನ್ನು ಉತ್ತೇಜಿಸಬೇಕು. ಶಿಕ್ಷಕರು

ವಿದ್ಯಾರ್ಥಿಗಳ ಕಲಿಕೆಗೆ ಸಹಾಯ ಮಾಡಬೇಕೇ ಹೊರತು ಕಲಿಕಾಂಶನ್ನು ನೇರವಾಗಿ ಪಾಠ ಮಾಡುವಂತಿಲ್ಲ. ಐದು 'ಇ'ಗಳ ಮಾದರಿ: ರಚನಾತ್ಮಕ ಕಲಿಕೆಯ ಮಾದರಿಗಳು ಸಾಕಷ್ಟಿದ್ದು ಅವುಗಳ ಸಹಾಯದಿಂದ ಕಲಿಕಾ ವಿಧಾನದ ಬಗ್ಗೆ ತಿಳಿದುಕೊಳ್ಳಬಹುದು.

ಅವುಗಳಲ್ಲಿ ಐದು 'ಇ' ಗಳ ಮಾದರಿಯೂ ಒಂದು.

* ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು.
* ಆವಿಷ್ಕರಿಸುವಿಕೆ/ಪತ್ತೆ ಹಚ್ಚುವಿಕೆ.
* ಅಭಿವ್ಯಕ್ತಿಸುವುದು ಅಥವಾ ವಿವರಿಸುವುದು
* ವಿಸ್ತರಿಸುವುದು ಹಾಗೂ ದೃಢೀಕರಣ
* ಮೌಲ್ಯಮಾಪನ.

**ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು:**

ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಬೇಕಾದರೆ ಅವರು ಆ ಕಲಿಕೆಯಲ್ಲಿ ಆಸಕ್ತಿಯನ್ನು ಹೊಂದುವಂತೆ ಮಾಡಬೇಕು. ಹೀಗೆ ಮಾಡಬೇಕಾದರೆ ನಿಜ ಜೀವನದ ಸಮಸ್ಯಾತ್ಮಕ ಸಂದರ್ಭ ನೀಡುತ್ತಾ, ಅವರನ್ನು ಆ ಮುಖಾಂತರ ಚಟುವಟಿಕೆಯಲ್ಲಿ ತೊಡಗಿಸಬೇಕು. ಅಲ್ಲಿ ಅರ್ಥಪೂರ್ಣ ಚರ್ಚೆಗೆ ಆಸ್ಪದ ಮಾಡಿಕೊಡುವ ಪ್ರಶ್ನೆಯನ್ನು ಕೇಳುವುದರ ಮೂಲಕ ಅವರನ್ನು ಉತ್ತೇಜಿಸಬೇಕು. ಈ ರೀತಿ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಮೊದಲನೆ ಹಂತವಾಗಿದೆ.

**ಆವಿಷ್ಕರಿವಿಕೆ/ಪತ್ತೆ ಹಚ್ಚುವಿಕೆ :**

ಈ ಹಂತದಲ್ಲಿ ಮಗುವು ಕಲಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಪರಿಕಲ್ಪನೆಯನ್ನು ಆವಿಷ್ಕರಿಸುವ ಮೂಲಕ ಹೆಚ್ಚಿನ ಜ್ಞಾನ ಪಡೆಯಲು ಹಾಗೂ ತನ್ನ ಜ್ಞಾನವನ್ನು ಸಂರಚಿಸಿಕೊಳ್ಳುತ್ತದೆ. ಅದಕ್ಕಾಗಿ ಕೆಲವು ಚಟುವಟಿಕೆಗಳನ್ನು ಶಿಕ್ಷಕರು ರೂಪಿಸಬೇಕಾಗುತ್ತದೆ. ಮಕ್ಕಳಿಗೆ ಸಂರಚಿಸಿದ ಚಟುವಟಿಕೆಗಳನ್ನು ನೀಡುತ್ತಾ, ಗುಂಪಿನಲ್ಲಿ ಕಲಿಯುವಂತೆ ಪ್ರೇರೇಪಿಸಲಾಗುತ್ತದೆ. ಕಲಿಕಾ ಸಾಮಗ್ರಿಗಳ ಬಳಕೆಗೆ ಅವಕಾಶ ನೀಡುವುದರ ಜೊತೆಗೆ ಅವರ ಅನ್ವೇಷಣೆ/ವಿಚಾರಗಳನ್ನು ಕಲಿಕಾ ಭಾಗವಾಗಿ ಮನವರಿಕೆ ಮಾಡಲು ಪ್ರೇರೇಪಿಸಲಾಗುತ್ತದೆ. ಸಮಸ್ಯೆಗಳಿಗೆ ಪರಿಹಾರದ ಹಂತಗಳನ್ನು ಗುರುತಿಸುವುದು ಈ ಹಂತದ ಪ್ರಮುಖ ಉದ್ದೇಶವಾಗಿದೆ.

**ಅಭಿವ್ಯಕ್ತಿಸುವುದು ಅಥವಾ ವಿವರಿಸುವುದು:**

ಕಲಿಕಾರ್ಥಿಯು ಹಿಂದಿನ ಹಂತದಲ್ಲಿ ಸಂರಚಿಸಿಕೊಂಡ ಜ್ಞಾನದ ವಿವರಣೆಯನ್ನು ಮಾತನಾಡುವ ಭಾಷೆಯಲ್ಲಿ ಸ್ಪಷ್ಟಪಡಿಸುತ್ತಾನೆ. ಕಲಿಕಾರ್ಥಿಯು ನೀಡುವ ವಿವರಣೆಯಲ್ಲಿನ ಪರಿಕಲ್ಪನೆಯ ಪರಿಪಕ್ವತೆಗೆ ಶಿಕ್ಷಕರು/ಅನುಕೂಲಿಸುವವರು ನಮ್ಯವಾದ ಸ್ಪಂದನೆ ನೀಡುತ್ತಾ ಸರಿಯಾದ ದಿಕ್ಕಿನಲ್ಲಿ ಕಲಿಕೆ ಮುಂದುವರೆಸುವಂತೆ ಪ್ರೋತ್ಸಾಹಿಸುತ್ತಾರೆ. ಉದಾಹರಣೆಗೆ ಸಂರಚನೆ ಮಾಡಿಕೊಂಡ ಜ್ಞಾನದ ವಿವರಣೆ ನೀಡುವುದು, ಮಾದರಿಯನ್ನು ರಚಿಸಿ-ವಿವರಣೆ ನೀಡುವುದು. ಸಮಸ್ಯೆಗೆ ನೀಡಿದ ಪರಿಹಾರವನ್ನು ಮತ್ತೆ ಮತ್ತೆ ಪರಿಶೀಲಿಸಿ ವಿಶ್ಲೇಷಿಸುವ ಕ್ರಿಯೆ ನಡೆಯುತ್ತದೆ. ವಿಚಾರಗಳನ್ನು ಚಿತ್ರ ಹಾಗೂ ನಕ್ಷೆಗಳಲ್ಲಿ ತೋರಿಸುವುದು. ಸಾಂಕೇತರಿಕವಾಗಿ ತಿಳಿಸಬೇಕಾದ ವಿಷಯಗಳನ್ನು ಸೂಚಿಸುವುದು, ಮೌಖಿಕ ಹಾಗೂ ಬರಹ ರೂಪದ ವರದಿ ನೀಡುವುದು.

**ವಿಸ್ತರಣೆ ಹಾಗೂ ದೃಢೀಕರಣ:** ಈ ಹಂತದಲ್ಲಿ ಸಂರಚಿಸಿದ ಜ್ಞಾನವನ್ನು ಹೆಚ್ಚಿಸುವ ಕಾರ್ಯವಾಗುತ್ತದೆ. ಸಂರಚಿತವಾದ ಜ್ಞಾನವನ್ನು ಇತರ ಜ್ಞಾನ/ಕಲಿಕಾ ಅನುಭವಗಳ ಜೊತೆಗೆ ಸಂಯೋಜಿಸಲಾಗುತ್ತದೆ. ಜ್ಞಾನದ ತಿಳುವಳಿಕೆಯನ್ನು ನಿತ್ಯ ಜೀವನದ ಸಂದರ್ಭದಲ್ಲಿ ಅನ್ವಯಿಸಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಕಲಿಕಾರ್ಥಿಯು ಜ್ಞಾನ ಮತ್ತು ಕೌಶಲವನ್ನು ಅನ್ವಯಿಸುತ್ತಾ, ಅಗತ್ಯಕ್ಕೆ ತಕ್ಕಂತೆ ಬದಲಾಯಿಸುತ್ತಾರೆ. ಸಂದೇಶ/ವಿಷಯಗಳನ್ನು ಮತ್ತು ಅಭಿಪ್ರಾಯ/ಯೋಚನೆಗಳನ್ನು ಹಂಚಿಕೊಳ್ಳುವುದರ ಜೊತೆಗೆ ಪೂರಕವಾದ ಹೊಸ ಹೊಸ ಪ್ರಶ್ನೆಗಳನ್ನು ಕೇಳುವ ಮನೋಭಾವ ವೃದ್ಧಿಸುವುದಾಗಿದೆ.

**ಮೌಲ್ಯಮಾಪನ:**

ಕಲಿಕೆಯ ಪ್ರತಿ ಹಂತದಲ್ಲಿಯೂ ಕಲಿಕಾರ್ಥಿಯು ಜ್ಞಾನ ಸಂಯೋಜನೆಯು ಯಾವ ಮಟ್ಟದಲ್ಲಿ ಆಗಿದೆ ಎಂಬುದರ ಮೌಲ್ಯಮಾಪನ ಮಾಡುವುದು ಈ ಹಂತದ ಕೆಲಸ. ಅದಕ್ಕಾಗಿ ನೂತನವಾಗಿ ಜಾರಿಗೆ ಬಂದಿರುವ ಸಿಸಿಇ ಯನ್ನು ಅಳವಡಿಸುವುದು. ಅದರಲ್ಲಿ ಮಗು ಹೇಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದೆ ಎಂಬುದನ್ನು ಚೆಕ್ ಲಿಸ್ಟ್ ಮುಖಾಂತರ ಗಮನಿಸುತ್ತಾ, ಸಮಸ್ಯೆ ಹಾಗೂ ಯೋಜನೆ ಒಳಗೊಂಡ ಕಲಿಕಾ ವಸ್ತುಗಳನ್ನು ನೀಡಲಾಗುತ್ತದೆ. ಕಲಿಕಾರ್ಥಿ ಸಂದರ್ಶನ ನಡೆಸುವುದು. ವಿವಿಧ ಸಾಧನ ತಂತ್ರಗಳನ್ನು ಬಳಸುವುದು. ಮುಂದಿನ ಕಲಿಕೆಗೆ ನೆರವಾಗುವಂತಹ ಮುಕ್ತ ಕಲಿಕಾ

ಪ್ರಶ್ನೆಗಳನ್ನು ನೀಡುವುದು ಇಂತಹ ಇತರೆ ಚಟುವಟಿಕೆಗಳಿಂದ ಮಕ್ಕಳ ಕಲಿಕೆಯನ್ನು ಖಚಿತವಾಗಿ ಗುರುತಿಸಲಾಗುವುದು.

ಯಾವುದೇ ತರಗತಿಯಲ್ಲಾಗಲಿ ಮಗುವಿಗೆ ಬೋಧನೆ ಮಾಡುವಾಗ ಒಂದು ವಿಷಯವನ್ನು ಮರೆಯುವಂತಿಲ್ಲ. ಮಗುವಿನಲ್ಲಿ ಸೂಕ್ತ ಸಿದ್ಧತೆ ಇದ್ದರೆ ಮಾತ್ರ, ಅದು ಅಗತ್ಯ ವಿನ್ಯಾಸ ಹೊಂದಿದ್ದರೆ ಮಾತ್ರ ಬೋಧನೆ ಸಾಧ್ಯ. ಇಲ್ಲವಾದರೆ ನಾವು ಹೇಳಿಕೊಡಲು ಇಚ್ಛಿಸುವ ವಿಷಯವನ್ನು ಅದು ಅರ್ಥ ಮಾಡಿಕೊಳ್ಳಲಾರದು. ನಾವು ಬೋಧನೆಯ ಮೂಲಕ ಮಗುವಿನ ಮನಸ್ಸಿನಲ್ಲಿ ವಿನ್ಯಾಸಗಳನ್ನು ಹುಟ್ಟುಹಾಕಲು ಸಾಧ್ಯವಿಲ್ಲ. ವಿನ್ಯಾಸಗಳನ್ನು ಬದಲಾಯಿಸುವ ಪ್ರಯತ್ನವೂ ಫಲಕೊಡದಿರಬಹುದು. ಮಕ್ಕಳು ಈಗಾಗಲೇ ಸಿದ್ಧತೆ ಮಾಡಿಕೊಂಡಿರದ ವಿಷಯಗಳನ್ನು ಬಲವಂತವಾಗಿ ಕಲಿಸಿಕೊಡುವುದರ ಪರಿಣಾಮವನ್ನು ಇದು ಎತ್ತಿ ತೋರಿಸುತ್ತದೆ. ಮಕ್ಕಳು ಸುಮ್ಮನೆ ಹೊಂದಿಸಿಕೊಂಡು ಮಾದರಿಗಳನ್ನು ಅನುಕರಿಸುತ್ತಾ ಹೋಗಬಹುದು. ಆದರೆ ಈ ಪ್ರಕ್ರಿಯೆಗಳು ಮಕ್ಕಳು ಇತರರ ಭಾವನೆಗಳನ್ನು ಗ್ರಹಿಸುವ ಬೆಳವಣಿಗೆಯನ್ನು ಪೋಷಿಸುವುದಿಲ್ಲ. ಮಗುವಿನ ಸಹಜ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತದೆ. ಇದಕ್ಕೆಲ್ಲಾ ಸೂಕ್ತವಾದ ಪರಿಹಾರವೇ ರಚನಾವಾದದ ಮೂಲಕ ಕಲಿಯುವುದು. ಈ ನಿಟ್ಟಿನಲ್ಲಿ ಎಲ್ಲಾ ಶಿಕ್ಷಕರು, ಶಿಕ್ಷಣಾಸಕ್ತರು ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಬಳಸಬೇಕಾಗಿದೆ.

## 3. ತರಗತಿ ನಿರ್ವಹಣಾ ಕೌಶಲ್ಯಗಳನ್ನು ಬಲಪಡಿಸುವಿಕೆ.

**ಅರ್ಥ**:- ತರಗತಿಯ ಯಶಸ್ವಿ ಬೋಧನೆಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಲು ಶಿಕ್ಷಕನು ತೆಗೆದುಕೊಳ್ಳುವ ಕ್ರಮಗಳೇ ತರಗತಿ ನಿರ್ವಹಣಾ ಕೌಶಲ್ಯಗಳು . ಈ ಕೌಶಲ್ಯಗಳು ತರಗತಿಯಲ್ಲಿ ಧನಾತ್ಮಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತವೆ.

**ಉದ್ದೇಶಗಳು:-** 1. ತರಗತಿ ನಿರ್ವಹಣಾ ಕೌಶಲ್ಯಗಳನ್ನು ಶಿಕ್ಷಕರು ನಿರ್ವಹಿಸುವುದರಿಂದ ಶೈಕ್ಷಣಿಕ, ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆಯನ್ನು ಬೆಂಬಲಿಸುವ ವಾತಾವರಣವನ್ನು ಪೋಷಿಸುತ್ತದೆ.

2. ವಿದ್ಯಾರ್ಥಿಗಳು ಕಲಿಕೆಯ ಮೇಲೆ ಕೇಂದ್ರೀಕರಿಸಬಹುದಾದ ರಚನಾತ್ಮಕ ಮತ್ತು ಸಂಘಟಿತ ವಾತಾವರಣವನ್ನು ಸುಗಮಗೊಳಿಸುತ್ತದೆ.

3. ಬೋಧಕ ಮತ್ತು ವಿದ್ಯಾರ್ಥಿಗಳ ನಡುವೆ ನಂಬಿಕೆ ಮತ್ತು ಆರೋಗ್ಯಕರ ಸಂಬಂಧಗಳನ್ನು ನಿರ್ಮಿಸುತ್ತದೆ.

4. ವಿದ್ಯಾರ್ಥಿ ಮತ್ತು ವಿದ್ಯಾರ್ಥಿಗಳ ನಡುವೆ ಆರೋಗ್ಯಕರ ಕಲಿಕಾ ಪೈಪೋಟಿಯನ್ನು ನಿರ್ಮಿಸುತ್ತದೆ.

5. ಕಲಿಕಾ ತೊಂದರೆಗಳನ್ನು ನಿವಾರಿಸುತ್ತದೆ.

**ಕಲಿಕಾ ನಿರ್ವಹಣಾ ಕೌಶಲ್ಯಗಳು:-**

1. **ಉಪನ್ಯಾಸ:** ತರಗತಿಗೆ ಮೌಖಿಕವಾಗಿ ಮಾಹಿತಿಯನ್ನು ಪ್ರಸ್ತುತಪಡಿಸುವುದು, ಆಗಾಗ್ಗೆ ದೃಶ್ಯ ಸಾಧನಗಳು ಅಥವಾ ಪ್ರದರ್ಶನಗಳೊಂದಿಗೆ ವಿವರಣೆ ನೀಡುವುದು.

2. **ಚರ್ಚೆ**: ವಿಮರ್ಶಾತ್ಮಕ ಚಿಂತನೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿಗಳ ನಡುವೆ ಸಂಭಾಷಣೆಗಳನ್ನು ಸುಗಮಗೊಳಿಸುವುದು.

3. **ಪ್ರಾತ್ಯಕ್ಷಿಕೆ:** ಪ್ರಾಯೋಗಿಕ ಉದಾಹರಣೆಗಳ ಮೂಲಕ ಕಾರ್ಯವನ್ನು ನಿರ್ವಹಿಸುವುದು ಅಥವಾ ಸಮಸ್ಯೆಯನ್ನು ಹೇಗೆ ಪರಿಹರಿಸುವುದು ಎಂಬುದನ್ನು ವಿದ್ಯಾರ್ಥಿಗಳಿಗೆ ತೋರಿಸುವುದು.

**4. ವಿಚಾರಣೆ-ಆಧಾರಿತ ಕಲಿಕೆ**: ಪ್ರಶ್ನೆ, ತನಿಖೆ ಮತ್ತು ಸಂಶೋಧನೆಯ ಮೂಲಕ ತಮ್ಮದೇ ಆದ ವಿಷಯಗಳನ್ನು ಅನ್ವೇಷಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು.

**5. ಸಹಕಾರಿ ಕಲಿಕೆ:** ಯೋಜನೆಗಳು ಅಥವಾ ಕಾರ್ಯಯೋಜನೆಗಳಲ್ಲಿ ಒಟ್ಟಾಗಿ ಕೆಲಸ ಮಾಡಲು ವಿದ್ಯಾರ್ಥಿಗಳನ್ನು ಸಣ್ಣ ಗುಂಪುಗಳಾಗಿ ಸಂಘಟಿಸುವುದು.

**6. ಸಮಸ್ಯೆ-ಆಧಾರಿತ ಕಲಿಕೆ:** ನೈಜ-ಪ್ರಪಂಚದ ಸಮಸ್ಯೆಗಳನ್ನು ವಿದ್ಯಾರ್ಥಿಗಳಿಗೆ ಪ್ರಸ್ತುತಪಡಿಸುವುದು ಮತ್ತು ವಿಮರ್ಶಾತ್ಮಕ ಚಿಂತನೆ ಮತ್ತು ವಿವರಣೆಯ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಲು ಅವರಿಗೆ ಮಾರ್ಗದರ್ಶನ ನೀಡುವುದು.

**7. ವಿಭಿನ್ನ ಕಲಿಕೋಪರಕರಣಗಳ ಮೂಲಕ ಸೂಚನೆ**: ತರಗತಿಯೊಳಗೆ ವೈವಿಧ್ಯಮಯ ಕಲಿಕೆಯ ಶೈಲಿಗಳು ಮತ್ತು ಸಾಮರ್ಥ್ಯಗಳನ್ನು ಸರಿಹೊಂದಿಸಲು ಬೋಧನಾ ವಿಧಾನಗಳು ಮತ್ತು ಸಾಮಗ್ರಿಗಳನ್ನು ಅಳವಡಿಸಿಕೊಳ್ಳುವುದು.

**8. ನಿರ್ದೇಶನಾತ್ಮಕ ಸೂಚನೆಗಳನ್ನು ನೀಡುವುದು:** ತರಗತಿಯ ಸಮಯವನ್ನು ಚಟುವಟಿಕೆಗಳು, ಚರ್ಚೆಗಳು ಮತ್ತು ಸಮಸ್ಯೆ-ಪರಿಹರಿಸಲು ಬಳಸುವಾಗ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಪರಿಶೀಲಿಸಲು ಸೂಚನಾ ವಿಷಯವನ್ನು ನಿಯೋಜಿಸುವುದು.

**9. ಪ್ರಾಜೆಕ್ಟ್-ಆಧಾರಿತ ಕಲಿಕೆ**: ಸಂಶೋಧನೆ, ಸೃಜನಶೀಲತೆ ಮತ್ತು ಸಹಯೋಗದ ಅಗತ್ಯವಿರುವ ದೀರ್ಘಾವಧಿಯ, ಬಹುಶಿಸ್ತೀಯ ಯೋಜನೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದು.

**10. ತಂತ್ರಜ್ಞಾನ ಏಕೀಕರಣ**: ಕಲಿಕೆಯನ್ನು ಹೆಚ್ಚಿಸಲು ಶೈಕ್ಷಣಿಕ ತಂತ್ರಜ್ಞಾನ ಉಪಕರಣಗಳು ಮತ್ತು ಸಂಪನ್ಮೂಲಗಳನ್ನು ಸಂಯೋಜಿಸುವುದು.

**ಕಲಿಕಾ ಪರಿಣಾಮಗಳು:-**

**1.** ದೃಶ್ಯ ಸಾಧನಗಳು ಅಥವಾ ಪ್ರದರ್ಶನಗಳೊಂದಿಗೆ ವಿವರಣೆ ನೀಡುವುದರಿಂದ ಕಲಿಕೆಯನ್ನು ಗಟ್ಟಿಗೊಳಿಸುತ್ತದೆ.

2. ರಚನಾತ್ಮಕ ಮತ್ತು ಸಂಘಟಿತ ವಾತಾವರಣವನ್ನು ಸುಗಮಗೊಳಿಸುವುದರಿಂದ ಕಲಿಕೆಯನ್ನು ಉತ್ತೇಜಿಸುತ್ತದೆ.

3. ಬೋಧಕ ಮತ್ತು ವಿದ್ಯಾರ್ಥಿಗಳ ನಡುವೆ ನಂಬಿಕೆ ಮತ್ತು ಆರೋಗ್ಯಕರ ಸಂಬಂಧ ಏರ್ಪಡುವುದರಿಂದ ಕಲಿಕಾ ಭಯವನ್ನು ದೂರ ಮಾಡುತ್ತದೆ.

4. ವಿವರಣಾತ್ಮಕ ಮಾತುಗಾರಿಕೆಯನ್ನು ಹೆಚ್ಚಿಸುತ್ತದೆ.

5. ಕಲಿಕಾ ಪೈಪೋಟಿ ಉಂಟಾಗುವುದರಿಂದ ಶಾಲೆಯ ಫಲಿತಾಂಶವನ್ನು ಹೆಚ್ಚಿಸುತ್ತದೆ.

| ರಾಜ್ಯಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆ, ಧಾರವಾಡ | | | | |
|---|---|---|---|---|
| ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ | | | | |
| ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯಯುತ ವಿಧಾನಗಳು | | | | |
| ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯಶಿಕ್ಷಕರ ನಾಯಕತ್ವ ತರಬೇತಿಗಾಗಿ ಸಿದ್ಧಪಡಿಸಿದ ಮಾಡ್ಯೂಲ್ | | | | |
| ಶೈಕ್ಷಣಿಕ ಮೇಲ್ವಿಚಾರಣಾಧಿಕಾರಿಗಳ "ಬೋಧನಾ-ಕಲಿಕಾ ಪ್ರಕ್ರಿಯೆಯ ನಾವೀನ್ಯಯುತ ಉಪಕ್ರಮಗಳ ಅನುಷ್ಠಾನ ಮೌಲ್ಯಮಾಪನ" ನಮೂನೆ | | | | |
| ಕ್ರ. ಸಂ | ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿಯ ನಾವೀನ್ಯಯುತ ಉಪಕ್ರಮಗಳು | ಒಟ್ಟು ಅಂಕ | ರುಬ್ರಿಕ್ಸ್ | ಮಾರ್ಗದರ್ಶನ/ಸಲಹೆ |
| 1 | ಬೋಧನಾ ಪದ್ಧತಿ | 10 | ತೊಡಗಿಸಿಕೊಳ್ಳುವಿಕೆ | |
| | | | ಅನ್ವೇಷಿಸು | |
| | | | ವಿವರಿಸು | |
| | | | ವಿಸ್ತರಿಸು | |
| | | | ಮೌಲ್ಯಮಾಪನ | |
| 2 | ಐಸಿಟಿ ಬಳಕೆ | 10 | ಉಪಕರಣಗಳ ಬಳಕೆ | |
| | | | ಸಂಪರ್ಕಿಸುವಿಕೆ | |
| | | | ವಿವರಿಸು | |
| | | | ತಾಂತ್ರಿಕತೆ | |
| | | | ಪರಿಣಾಮ | |
| 3 | ಶೈಕ್ಷಣಿಕ ಆಪ್ ಗಳ ಬಳಕೆ | 10 | ಆಪ್ ಗಳ ಸಂಗ್ರಹ | |
| | | | ಉಪಯುಕ್ತತೆ | |
| | | | ವಿವರಿಸು | |
| | | | ಲಭ್ಯತೆ | |
| | | | ಪರಿಣಾಮ | |

| | | | | |
|---|---|---|---|---|
| 4 | ಯೋಜನಾ ಪದ್ಧತಿ | 10 | ತೊಡಗಿಸಿಕೊಳ್ಳುವಿಕೆ<br>ಅನ್ವೇಷಿಸು<br>ವಿವರಿಸು<br>ವಿಸ್ತರಿಸು<br>ಮೌಲ್ಯಮಾಪನ | |
| 5 | ಪ್ರಯೋಗಾಲಯ ಬಳಕೆ | 10 | ತೊಡಗಿಸಿಕೊಳ್ಳುವಿಕೆ<br>ಅನ್ವೇಷಿಸು<br>ವಿವರಿಸು<br>ವಿಸ್ತರಿಸು<br>ಮೌಲ್ಯಮಾಪನ | |
| 6 | ಗ್ರಂಥಾಲಯ/ದಿನಪತ್ರಿಕೆ/ಮ್ಯಾಗಜಿನ್ ಬಳಕೆ | 10 | ಸಂಗ್ರಹಣೆ<br>ಜೋಡಿಸುವಿಕೆ<br>ಅರ್ಥೈಸುವಿಕೆ<br>ವಿವರಣೆ<br>ಮಹತ್ವ | |
| 7 | ಕಪ್ಪು ಹಲಗೆ ನಿರ್ವಹಣೆ | 10 | ಸ್ವಚ್ಛತೆ<br>ಬರವಣಿಗೆ<br>ಬಣ್ಣಗೊಳಿಸುವಿಕೆ<br>ಚಿತ್ರಣ<br>ಸಾರಾಂಶೀಕರಣ | |
| 8 | ಭಾಷಾ ಪ್ರಯೋಗಾಲಯ ಬಳಕೆ | 10 | ಸಂಭಾಷಣೆ ಶೈಲಿ<br>ಶಬ್ದಗಳ ಉಚ್ಛಾರಣೆ<br>ವಿವರಿಸು<br>ಉದ್ಧಾರವಾಚಕಗಳ ಬಳಕೆ<br>ಎ.ವಿ.ಏಡ್ಸ್ ಬಳಕೆ | |

| | | | | |
|---|---|---|---|---|
| 9 | ಇಲಾಖಾ ವೆಬ್‌ಸೈಟ್ ಮಾಹಿತಿಗಳ ಬಳಕೆ | 10 | ತೊಡಗಿಸಿಕೊಳ್ಳುವಿಕೆ | |
| | | | ಅನ್ವೇಷಿಸು | |
| | | | ವಿವರಿಸು | |
| | | | ವಿಸ್ತರಿಸು | |
| | | | ಮೌಲ್ಯಮಾಪನ | |
| 10 | ಕಲಿಕಾ ಫಲ | 10 | ಉದ್ದೇಶಗಳ ರಚನೆ | |
| | | | ಸಂವಹನ | |
| | | | ನಿಖರತೆ | |
| | | | ವರ್ತನಾ ಬದಲಾವಣೆ | |
| | | | ಮೌಲ್ಯಮಾಪನ | |

## ಬೋಧನೆ - ಕಲಿಕಾ ಪ್ರಕ್ರಿಯೆಯಲ್ಲಿ ನಾವೀನ್ಯಯುತ ವಿಧಾನಗಳು – ಮೌಲ್ಯಮಾಪನ

1. ಇಂದಿನ ಬೋಧನೆ-ಕಲಿಕಾ ವಿಧಾನಗಳಲ್ಲಿ ಪ್ರಕ್ರಿಯೆಯುಯಾವಾಗಲೂ............... ಕೇಂದ್ರಿತವಿರಬೇಕು.

   ಅ) ಶಿಕ್ಷಕ ಬ)ಪುಸ್ತಕ ಕ) ಮಗು ಡ) ಸಮಾಜ

2. ಮಕ್ಕಳಲ್ಲಿ ಆಳವಾದ ಕಲಿಕೆ ಮತ್ತು ಅರ್ಥವಾಗುವಿಕೆಗೆ ಬೋಧನೆಯಲ್ಲಿ................ಅವಶ್ಯಕ.

   ಅ) ಕಾರ್ಯಪುಸ್ತಕ ಬ) ರೇಖಾನಕ್ಷೆ ಕ) ಇ-ಸಾಧನಗಳು ಡ) ಎಲ್ಲವೂ

3. ಶಿಕ್ಷಕರು ವೈವಿಧ್ಯಯುತ ಬೋಧನೆಯಲ್ಲಿ ..........................ನ್ನುಅಳವಡಿಸಿಕೊಳ್ಳಬೇಕು.

   ಅ) ಸ್ಥಿತಿಸ್ಥಾಪಕತ್ವ&ಹೊಂದಾಣಿಕೆ ಬ) ಕೇವಲ ಪಠ್ಯಪುಸ್ತ ಕ) ಮೊಬೈಲ್ ಫೈಲ್ ಗಳು ಡ) ಕೇವಲ ಸೈದ್ಧಾಂತಿಕ ನಿಲುವುಗಳು

4. ಡಿಜಿಟಲ್ ಸಾಧನಗಳು ಮತ್ತು ಸಂಪನ್ಮೂಲಗಳು ಬೋಧನೆ-ಕಲಿಕಾ ಪ್ರಕ್ರಿಯೆಯನ್ನು ........... ಗೊಳಿಸುತ್ತವೆ.

   ಅ) ನಿಧಾನ ಬ) ಬಲ ಕ) ಪರಿಣಾಮಕಾರಿ ಡ) ವಿಕೇಂದ್ರೀಕರಣ

5. ಸಹಯೋಗ ಕಲಿಕೆಯು ಮಕ್ಕಳಲ್ಲಿ ................................ ಮೂಡಿಸುತ್ತದೆ.

   ಅ) ಭಯ ಬ)ಅಧೈರ್ಯ ಕ) ಸಾಮಾಜಿಕ ಮತ್ತು ಸಂವಹನಕೌಶಲ

   ಡ) ಅಸಹಕಾರ

6. ಕಲಿಕೆಯಲ್ಲಿ ಕೃತಕ ಬುದ್ಧಿಮತ್ತೆಯು ..................... ನ್ನು ಉತ್ತೇಜಿಸುತ್ತದೆ.

   ಅ) ಸ್ವಯಂಕಲಿಕೆ ಬ) ದತ್ತಾಂಶ ವಿಶ್ಲೇಷಣೆ ಕ) ಸೃಜನಶೀಲತೆ ಡ) ಎಲ್ಲವೂ

7. ಯೋಜನಾ ವಿಧಾನವು ಮಕ್ಕಳಲ್ಲಿ ........................ ಉನ್ನತಗೊಳಿಸುತ್ತದೆ.

   ಅ) ಸಮಸ್ಯೆ ಪರಿಹಾರ ಬ) ಅನಾದರ ಕ) ವೈಯಕ್ತಿಕ ದ್ವೇಷ ಡ) ಕಲಿಕಾವೆಚ್ಚ

8. ಪ್ರಶ್ನಿಸುತ್ತ ಪರಿಹಾರ ಕಂಡುಕೊಳ್ಳುವ ಮಾರ್ಗ .................. ಬೋಧನೆಯಲ್ಲಿ ಕಂಡುಬರುತ್ತದೆ.

   ಅ) ನಿಗಮನ ಬ) ಮಾರ್ಗದರ್ಶಿ ಸಂಶೋದನಾ ಕ) ಕಥೆ ಹೇಳುವುದು ಡ) ಯಾವುದೂಅಲ್ಲ

9. ಕ್ಷೇತ್ರ ಸಂಚಾರ ವಿಧಾನದಲ್ಲಿ ಬೋಧನೆಯು ಹೊರಾಂಗಣವಾಗಿದ್ದರೂ ಕೂಡ ಮಕ್ಕಳಲ್ಲಿ ...................... ಬೆಳೆಸುತ್ತದೆ.

   ಅ) ಆಲೋಚನೆ ಬ) ವೈಚಾರಿಕತೆ ಕ) ವಾಸ್ತವಿಕತೆ ಡ)ಎಲ್ಲವೂ

10. ತರಗತಿ ಕೋಣೆಯಲ್ಲಿ ಬೋಧನಾ ಸಮಯದಲ್ಲಿ ..........................ವಿಧದ ಮೌಲ್ಯಮಾಪನ ನಡೆಯುತ್ತದೆ.

    ಅ) ಸಂಕಲನಾತ್ಮಕ ಬ) ರೂಪಣಾತ್ಮಕ ಕ) ಎರಡೂ ಹೌದು ಡ) ಎರಡೂ ಅಲ್ಲ.

## 6.ಉಪಸಂಹಾರ:

ಬೋಧನೆ ಮತ್ತು ಕಲಿಕೆ ಹಲವು ಚಂಚಲತೆಗಳಿಂದ ಕೂಡಿರುವ ಪ್ರಕ್ರಿಯೆಗಳು. ಕಲಿಯುವವರ ಕಲಿಕೆಯ ಅನುಭವಗಳ ವ್ಯಾಪ್ತಿಯನ್ನು ವೃಧ್ಧಿಸುವಂತಹ ಗುರಿಯನ್ನು ತಲುಪಲು ಶ್ರಮಿಸುವಾಗ ಮತ್ತು ಹೊಸ ಜ್ಞಾನವನ್ನು , ವರ್ತನೆ ಹಾಗೂ ಕೌಶಲ್ಯವನ್ನು ಸಂಯೋಜಿಸುವಾಗ ಈ ಭೇಧಗಳು ಪರಸ್ಪರ ವರ್ತಿಸುತ್ತವೆ.ಕಳೆದ ಶತಮಾನದಿಂದ ಕಲಿಕೆಯ ಮೇಲೆ ಅನೇಕ ದೃಷ್ಟಿವೈಶಾಲ್ಯಗಳು ಮೂಡಿ ಬಂದಿವೆ. ಅವುಗಳಲ್ಲಿ ಅರಿವು ಮೂಡಿಸಬಲ್ಲ ( ಕಲಿಕೆ ಒಂದು ಮಾನಸಿಕ ಕಾರ್ಯಕ್ರಿಯೆ): ಮತ್ತು ರಚನಾತ್ಮಕ (ಜ್ಞಾನವು ಕಲಿಯುವ ಪ್ರಕ್ರಿಯೆಯ ಫಲಿತಾಂಶದ ಒಂದು ಭಾಗ) ಮುಖ್ಯವಾದವು. ನಿಜವಾಗಿ ಹೇಳುವುದಾದರೆ ಈ ಎರಡೂ ವಾದಗಳನ್ನು ಬೇರೆಬೇರೆಯಾಗಿ ಆಲೋಚಿಸುವದಕ್ಕಿಂತ ಇವುಗಳನ್ನು ಕಲಿಕೆಯ ಅನುಭವಗಳ ಸಮಾಗಮ ಮಾಡುವ ಸಂಭವನೀಯ ವ್ಯಾಪ್ತಿಯ ಜೊತೆಗೆ ಕಲ್ಪಿಸಿಕೊಳ್ಳುವುದು ಬಹು ಸೂಕ್ತ. ಅನುಕಲನ ಪ್ರಕ್ರಿಯೆ ಮಾಡುವಾಗ ಅರಿವು ಮೂಡಿಸಬಲ್ಲ ಶೈಲಿ, ಕಲಿಕೆಯ ಶೈಲಿ, ನಮ್ಮ ಬುದ್ಧಿಸೂಕ್ಷ್ಮತೆ ಬಹು ಸಂಖ್ಯಾ ಪ್ರಕೃತಿ ಮತ್ತು ವಿಶೇಷ ಬೇಡಿಕೆಯುಳ್ಳ ಹಾಗೂ ವಿವಿಧ ಸಂಸ್ಕೃತಿಯ ಹಿನ್ನೆಲೆಯಿಂದ ಬಂದಂತಹ ಜನರಿಗೆ ಸಂಬಂಧಿತ ಕಲಿಕೆ , ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅತಿ ಮುಖ್ಯ.

ಒಟ್ಟಿನಲ್ಲಿ ನಾವಿನ್ಯಯುತ ಬೋಧನಾ ಕಲಿಕಾ ಪ್ರಕ್ರಿಯೆಯು ಶಾಲೆಯಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಹಾಗೂ ಯಾವ ಯಾವ ರೀತಿಯಲ್ಲಿ ಶಿಕ್ಷಕರು ಬೋಧಿಸಿದರೆ ಉತ್ತಮ ಎಂಬುವಂತಹ ಅಂಶಗಳನ್ನು ಇಲ್ಲಿ ತಿಳಿದುಕೊಳ್ಳಬಹುದು. ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ನಡುವೆ ನಡೆಯುವ ಸಂವಾದ ಹಾಗೂ ವಿಚಾರಗಳನ್ನು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕಾಣಬಹುದು.

## 6. ಗ್ರಂಥಋಣ/ ಆಧಾರಗಳು:


1. ಕಲಿಕಾ ಬೋಧನಾ ಪ್ರಕ್ರಿಯೆಯ ಮನೋವಿಜ್ಞಾನ. ಡಾ/ ವಾಮದೇವಪ್ಪಾ
2. ಬೆಳ್ಳಿಮೋಡ ನಲಿಕಲಿ ಸಾಹಿತ್ಯ
3. ನಿಷ್ಠಾ ತರಬೇತಿಗಳ ಸಾಹಿತ್ಯ
4. ಪ್ರೌಢಶಾಲಾ ಶಿಕ್ಷಕರ ತರಬೇತಿ ಸಾಹಿತ್ಯ ಡಿ.ಎಸ್.ಇ.ಅರ್.ಟಿ
5. Appropriate Methodology and Social and Context –Adrin Holliday (Cambridge Lanhugae Teaching Library
6. Child Development with Pedagogy & Methodology-Rohit Vaidwan.
7. Principles, Methods and Techniques of Teaching – A C Aggarwal vikash prakashan.

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836–2441129
ಇ–ಮೇಲ್ : sislepdirector.dwd@gmail.com